ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 12 ಮಾರ್ಚ್ 22, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ....

ಪಶ್ಚಿಮ ಬಂಗಾಳ ಚುನಾವಣೆ

ಪ್ರಧಾನಮಂತ್ರಿಗಳ ಹತಾಶ ಅಪಪ್ರಚಾರ

"ರಾಜೀವರ ಕೊನೆಯಿಲ್ಲದ ಬುರುಡೆ ಮಾತುಗಳಿಗೆ ಉತ್ತರಿಸಿ ನನಗೆ ಸುಸ್ತಾಗಿದೆ"

ಕಾಂ. ಜ್ಯೋತಿ ಬಸು ಪ. ಬಂಗಾಳದ ಚುನಾವಣಾ ಪ್ರಚಾರದಲ್ಲಿ ರಾಜೀವರ ಬುರುಡೆಯೊಂದಕ್ಕೆ ಉತ್ತರಿಸುತ್ತಾ ಹೇಳಿದ ಮಾತಿದು. ಚುನಾವಣೆ ಹತ್ತಿರವಾದಂತೆ ಕಾಂಗ್ರೆಸ್ (ಐ) ರಾಜ್ಯ ನಾಯಕರು ಸಿ. ಪಿ. ಐ. (ಎಂ) ಚುನಾವಣೆಯಲ್ಲಿ ಅಕ್ರಮ ಮಾಡಲು ಸಿದ್ಧತೆ ನಡೆಸಿದೆ ಎಂದು ಹೇಳುತ್ತಾ ನಿಚ್ಚಳವಾಗುತ್ತಿರುವ ತಮ್ಮ ಸೋಲಿಗೆ ಸಬೂಬಿಗೆ ತಯಾರಾಗುತ್ತಿದ್ದಾರೆ.

ಈಗಾಗಲೇ ಎಡರಂಗ ಸರ್ಕಾರ ರಾಜ್ಯದ ಬೆಳವಣಿಗೆಗೆ ವಿರುದ್ಧವಾಗಿದೆ, ಜನವಿರೋಧಿಯಾಗಿದೆ ಎಂಬ ಬುರುಡೆಗೆ ಯಾರೂ ಹೆಚ್ಚು ಸೊಪ್ಪು ಹಾಕಿಲ್ಲದ್ದರಿಂದ ಎರಡನೆಯ ಸುತ್ತಿನ ಪ್ರಚಾರದಲ್ಲಿ ರಾಜೀವರು ಹೊಸ ಬುರುಡೆಗಳನ್ನೂ, ಆಪಾದನೆಗಳನ್ನು ಸೃಷ್ಟಿಸಿದ್ದಾರೆ. ಉತ್ತರ ಬಂಗಾಳದ ಬೆಳವಣಿಗೆಯ ಬಗ್ಗೆ ಅಧ್ಯಯನ ಮಾಡುವ ಉದ್ದೇಶದಿಂದ ಹೊರಟ ಕೇಂದ್ರ ಅಧ್ಯಯನ ತಂಡದ ಭೇಟಿಗೆ ರಾಜ್ಯಸರ್ಕಾರ ಅಡ್ಡಿ ಮಾಡಿದೆ ಎಂಬ ಆಪಾದನೆ ಇಂತಹ ಒಂದು ನಮೂನೆ. ಇದು ಹಲವು ಸುಳ್ಳುಗಳ ಸರಮಾಲೆ. ಮೊದಲನೆಯದಾಗಿ ಯೋಜನಾ ಆಯೋಗದ ಈ ತಂಡ ರಾಜ್ಯದ 'ರಾಜಕೀಯ ಪರಿಸ್ಥಿತಿ' ಅಧ್ಯಯನ ಮಾಡಲು ಹೊರಟಿತು. ಬೆಳವಣಿಗೆಯ ಬಗ್ಗೆ ತಲೆ ಕೆಡಿಸಿಕೊಂಡಿರಲಿಲ್ಲ. ಅಷ್ಟೇ ಅಲ್ಲದೆ ಈ ತಂಡ ತಮ್ಮ ಭೇಟಿಯನ್ನು ತಾನಾಗಿಯೇ ಮುಂದಕ್ಕೆ ಹಾಕಿತು. ಕೇವಲ ಅಧಿಕಾರಿಗಳಿಂದ ಕೂಡಿದ ಯೋಜನಾ ಆಯೋಗವನ್ನು 'ರಾಜಕೀಯ ಪರಿಸ್ಥಿತಿಯಕ್ಕೆ ದುರುಪಯೋಗ ಪಡಿಸುವ ಸತ್ಯ ಮರೆಮಾಚುವುದು 'ರಾಜ್ಯದ ಅಭಿವೃದ್ಧಿಗೆ ಹಣ ನೀಡುವುದಕ್ಕೆ ರಾಜಕೀಯ ಅಧ್ಯಯನ ಬೇಕಂತೆ!' ಇದರ ಅಪಾಯಕಾರಿ ಅಂಶ.

ಸಿ.ಪಿ.ಐ. (ಎಂ) ತನ್ನ "ಕಾರ್ಯಕರ್ತರ ರಾಜ್ಯ'' (cadre raj) ನಡೆಸುತ್ತಿದೆ. ಪಕ್ಷದ ಕಾರ್ಯಕರ್ತರು ಮತ್ತು ಬೆಂಬಲಿಗರಿಗೆ ಅನುಕೂಲ ಮಾಡಿಕೊಡುವುದಷ್ಟೆ ಆದರೆ ಸರ್ಕಾರದ ಉದ್ದೇಶ ಎಂಬುದು ಇನ್ನೊಂದು ಆಪಾದನೆ. ಪಕ್ಷದ ಸಮರ್ಥ, ಶಿಸ್ತುಬದ್ಧ ಮತ್ತು ಜನಪ್ರಿಯ ಕಾರ್ಯಕರ್ತರು ಮತ್ತು ಜನರ ಸಂಬಂಧದಲ್ಲಿ ಹುಳಿ ಹಿಂಡುವುದಷ್ಟೇ ಇದರ ಉದ್ದೇಶ.

ಎಡರಂಗ ಸರ್ಕಾರ 'ಓಡಾಡುವ ಸಾಮರ್ಥ್ಯ ಸಹ ಕಳೆದುಕೊಂಡ ಅಸಮರ್ಥ ಮುದುಕ' ಮಂತ್ರಿಗಳಿಂದ ತುಂಬಿ ಹೋಗಿವೆ ಎಂಬ ಕೀಳು ಮಟ್ಟದ ವೈಯುಕ್ತಿಕ ಅಪಾದನೆ ಮಾಡಲು ನಮ್ಮ ಪ್ರಧಾನಮಂತ್ರಿಗಳು ಹೇಸಿಲ್ಲ. ನಮ್ಮ ಯುವ ಪ್ರಧಾನ ಮಂತ್ರಿಯವರ ಮಂತ್ರಿಮಂಡಲವನ್ನು ವರ್ಷಕ್ಕೆ ಆರು ಬಾರಿ ಬದಲಾಯಿಸುವ ಅವಶ್ಯಕತೆ ಏಕೆ ಬರುತ್ತದೆ ಎಂಬುದನ್ನೇಕೆ ಅವರು ವಿವರಿಸುವುದಿಲ್ಲ. ಸಿ.ಪಿ.ಎಂ. ನ ಸಮಾಜವಾದದ ಉದ್ದೇಶ. ಬಡತನವನ್ನು ಕಾಯ್ದಿರಿಸುವುದು. ಕಾಂಗ್ರೆಸ್' ಸಮಾಜವಾದದ ಉದ್ದೇಶ ಬಡತನ ನಿರ್ಮೂಲ ಮಾಡುವುದು' ಎಂಬುದು ಇನ್ನೊಂದು ಅಣಿ ಮುತ್ತು ! ಸಮಾಜವಾದದ ಬಗ್ಗೆ ರಾಜೀವರ ಅಪಾರ ಅಜ್ಞಾನದ ಬಗ್ಗೆ ಗೊತ್ತಿರುವವರಿಗೆ ಬಹುಶಃ ಇದರಿಂದ ಆಶ್ಚರ್ಯಕರವಾಗಲಿಕ್ಕಿಲ್ಲ. 30 ವರ್ಷ ಕಾಂಗ್ರೆಸ್ ಸಮಾಜವಾದದ ಬೊಗಳೆ ಗೊತ್ತಿರುವವರಿಗೆ ಬಡವರ ನಿರ್ಮೂಲನ ಕಾರ್ಯಕ್ರಮ ಅರ್ಥವಾಗುವುದಿಲ್ಲವೇ. ?

ಚುನಾವಣಾ ಪ್ರಚಾರದ ಕೊನೆಯ ಹಂತದಲ್ಲಿ ಸಾಂಪ್ರದಾಯಿತವಾದ ಪೋಸ್ಟರು, ಗೋಡೆಬರಹ, ಬೀದಿ ಸಭೆಗಳು, ಮನೆ ಮನೆ ಪ್ರಚಾರವಲ್ಲದೆ ಸಾಂಸ್ಕೃತಿಕ ಮಾಧ್ಯಮಗಳನ್ನು ಬಹುಶಃ ಮೊದಲ ಬಾರಿಗೆ ಬಳಸಿಕೊಳ್ಳಲಾಗುತ್ತಿದೆ. ಕಾಂಗ್ರೆಸ್ [ಐ] ಕೇಂದ್ರ ಸರ್ಕಾರದ ಅಧೀನದಲ್ಲಿರುವ ರೇಡಿಯೋ, ಟಿ. ವಿ ಯನ್ನು ಮುಲಾಜಿಲ್ಲದೆ ದುರುಪಯೋಗ ಮಾಡುತ್ತಿದೆ. ಎಡರಂಗ ಇದಕ್ಕೆ ಪ್ರತಿಭಟನೆಯಾಗಿ ರೇಡಿಯೋ, ಟಿ.ವಿ. ಗಳಿಗೆ ಬಹಿಷ್ಕಾರ ಹಾಕಿವೆ. ಎಲ್ಲಾ

(8ನೇ ಪುಟ ನೋಡಿ)

ಚುನಾವಣೆಗಳಲ್ಲಿ ಸಿ. ಬಿ. ಐ ಕೈವಾಡ

ಕೇರಳ ಕಾಂಗ್ರೆಸ್‌ನ ಎರಡು ಬಣಗಳ ನಡುವೆ ಸೀಟು ಹಂಚಿಕೆಗಾಗಿ ನಡೆ ನಡೆದಿದ್ದ ಕಿತ್ತಾಟವನ್ನು ತಮ್ಮ ಪ್ರಭಾವ ಬೀರಿ ಬಗೆಹರಿಸಲೆಂದು ಕೇಂದ್ರ ಸರ್ಕಾರ ಗೂಢಚರ್ಯೆ ಬ್ಯೂರೋದ ನಿರ್ದೇಶಕ ನಾರಾಯಣನ್ ಜಂಟಿ ನಿರ್ದೇಶಕ ರತೀಂದ್ರನ್‌ರವರನ್ನು ಕೇರಳಕ್ಕೆ ಕಳುಹಿಸಿತು ಎರ್ನಾಕುಲಂನಲ್ಲಿ ಬಿಡಾರ ಹೂಡಿದ್ದ ರತೀಂದ್ರನ್ ಫೋನ್‌ಗಳ ಮೂಲಕ ತನ್ನ ಅಧೀನ ಅಧಿಕಾರಿಗಳ ಮೂಲಕ ಕೇರಳ ಕಾಂಗ್ರೆಸ್‌ನ ನಾಯಕರನ್ನು ಸಂಪರ್ಕಿಸಿದ...

ಹಾಡುಹಗಲೇ ಕೇಂದ್ರ ಗೂಢಚರ್ಯೆ ಬ್ಯೂರೊ ಪೋಲೀಸ್ ಅಧಿಕಾರಿಗಳನ್ನು ಈ ರೀತಿ ದುರುಪಯೋಗ ಮಾಡಿಕೊಂಡಿರುವುದು ಕಾಂಗ್ರೆಸ್ (ಐ) ಚುನಾವಣೆಗಳಲ್ಲಿ ಗೆಲ್ಲಲು ಎಂತಹ ಹತಾಶಮಾರ್ಗಗಳನ್ನು ಅನುಸರಿಸಲೂ ಹೇಸುವುದಿಲ್ಲವೆಂಬುದನ್ನು ಇದು ಸಾಬೀತಪಡಿಸುತ್ತದೆ.

ಈ ಅಕ್ರಮಗಳನ್ನು ಕೂಡಲೇ ನಿಲ್ಲಿಸಬೇಕೆಂದು ಪಿ. ಬಿ. ಚುನಾವಣಾ ಕಮೀಷನರ್‌ನ್ನು ಒತ್ತಾಯಿಸಿದೆ. ಪ್ರಜಾಸತ್ತಾತ್ಮಕ ವಿಭಾಗಗಳು ಇದರ ವಿರುದ್ಧ ಧ್ವನಿಯೆತ್ತಬೇಕೆಂದು ಕರೆ ನೀಡಿದೆ.

ಯು.ಡಿ.ಎಫ್.ಗೆ ಗೆಲ್ಲಲೂ ಯಾವ ಮಾರ್ಗವಾದರೂ ಸರಿ

ಕೇರಳದಲ್ಲಿ ಆಳುವ ಯು ಡಿ.ಎಫ್. ನ ನ್ಯಾಯ ಬಾಹಿರ ನಡವಳಿಕೆಗಳ ವಿರುದ್ಧ ಪ್ರತಿಭಟಿಸಿ, ವಿರೋಧ ಪಕ್ಷಗಳು ಸರಕಾರೀ ಬೆದರಿಕೆ, ಅಡ್ಡಿ ಆತಂಕವಿಲ್ಲದೆ ಕಾರ್ಯ ನಿರ್ವಹಿಸಲು ಅವಕಾಶ ಮಾಡಿಕೊಡಬೇಕೆಂದು ಸಿ.ಪಿ.ಐ. [ಎಂ] ನ ಪಾಲಿಟ್‌ಬ್ಯೂರೋ ಚುನಾವಣಾ ಆಯೋಗವನ್ನು ಒತ್ತಾಯಿಸಿದೆ.

"ಕೇರಳದ ಚುನಾವಣಾ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರಲು ಯು.ಡಿ.ಎಫ್. ಸರ್ಕಾರ ಹತಾಶ ಹಾಗೂ ಕಾನೂನು ಬಾಹಿರ ಕ್ರಮಗಳನ್ನು ಕೈಗೊಳ್ಳುತ್ತಿರುವುದನ್ನು ಸಿ.ಪಿ.ಐ. [ಎಂ] ನ ಪಾಲಿಟ್‌ಬ್ಯೂರೋ ಹೆಚ್ಚೆಚ್ಚು ಆತಂಕದಿಂದ ಗಮನಿಸುತ್ತದೆ. ಈ ದುರಾಚಾರಗಳ ವಿರುದ್ಧ ಸಿ. ಪಿ. ಐ. [ಎಂ] ರಾಜ್ಯಮಟ್ಟದಲ್ಲೂ, ಕೇಂದ್ರ ಮಟ್ಟದಲ್ಲೂ ಚುನಾವಣಾ ಆಯೋಗಕ್ಕೆ ಬಲವಾದ ಪ್ರತಿಭಟನೆ ಸಲ್ಲಿಸಿದೆ.

ಮಲಪ್ಪುರಾ ಜಿಲ್ಲೆಯ ವಾಂಡೂರ್ ಕ್ಷೇತ್ರದಲ್ಲಿ ಒಬ್ಬ ಪಕ್ಷೇತರ ಅಭ್ಯರ್ಥಿ ತನ್ನ ಉಮೇದುವಾರಿಕೆಯನ್ನು ವಾಪಸು ಪಡೆಯುವಂತೆ ಬೆದರಿಸುವ ಪ್ರಯತ್ನದಲ್ಲಿ ಫೆಬ್ರವರಿ 26 ರಂದು ಸ್ವತಃ ಮುಖ್ಯಮಂತ್ರಿ ಕರುಣಾಕರನ್ ಭಾಗವಹಿಸಿದ್ದಾರೆ. ಆ ಅಭ್ಯರ್ಥಿಗೆ ಮುಖ್ಯಮಂತ್ರಿಗಳ ಮುಂದೆಹಾಜರಾಗುವಂತೆ ಆಜ್ಞೆ ಕಳಿಸಿದಾಗ ಒಂದು ದೊಡ್ಡ ಪೋಲೀಸ್ ಪಡೆ ಸಜ್ಜಾಗಿ ನಿಂತಿತ್ತು. ಅಭ್ಯರ್ಥಿಯನ್ನು ಬೆದರಿಸಲು ಆ ಪಡೆಯನ್ನು ಬಳಸಿಕೊಳ್ಳಲಾಯಿತು.

ಯು.ಡಿ ಎಫ್. ಮಂತ್ರಿಗಳು ಚುನಾವಣಾ ನಡವಳಿಕೆಗಳನ್ನು ಬಹಿರಂಗವಾಗಿ ಉಲ್ಲಂಘಿಸಿ ಹೊಸ ಹೊಸ ಯೋಜನೆಗಳ, ನೇಮಕಗಳ ಘೋಷಣೆ ಮಾಡುತ್ತಿದ್ದಾರೆ. ಕಂದಾಯಮಂತ್ರಿ ರಾಜ್ಯದ ಬರಪೀಡಿತ ಪ್ರದೇಶಗಳ ಮತದಾರರ ಮೇಲೆ ಪ್ರಭಾವ ಬೀರಲು ನೂರು ಕೋಟಿ ರೂ.ಗಳ ಅಣೆಕಟ್ಟುಗಳ ಯೋಜನೆಯ ಘೋಷಣೆ ಮಾಡಿದ್ದಾರೆ. ಶಿಕ್ಷಣ ಮಂತ್ರಿಯವರು ಮಕ್ಕಳ ಸಾಹಿತ್ಯದ ರಾಜ್ಯ ಸಂಸ್ಥೆಯ ನಿರ್ದೇಶಕರ ಗ್ರಂಥಶಾಲಾ ಸಂಘದ ಆಡಳಿತ ಮಂಡಳಿಯ ನೇಮಕ ಮಾಡಿದ್ದಾರೆ. ಜಲ ಇಲಾಖೆ ನೀರಿನ ಟ್ಯಾಂಕುಗಳಿಗೆ 1200 ವಾಚ್‌ಮನ್‌ಗಳನ್ನು ತಗೊಳುವ ಖಾಸಗೀ ಕಂಟ್ರಾಕ್ಟುಗಳ ಬಗ್ಗೆ ಹಾಗೂ ಇಲಾಖೆಯಲ್ಲಿ ಸುಮಾರು ಸಂಖ್ಯೆಯಲ್ಲಿ ಸುಪರ್‌ವೈಸರುಗಳನ್ನೂ ನೇಮಿಸಿಕೊಳ್ಳುವ ಜಾಹೀರಾತು ನೀಡಿದೆ.

ಚುನಾವಣಾ ಡ್ಯೂಟಿಯ ಮೇಲಿರುವ ಸರ್ಕಾರೀ ನೌಕರರು ತಮ್ಮ ಹಕ್ಕಿನಂತೆ ಅಂಚೆ ಮತ ಪತ್ರದ ಸೌಲಭ್ಯವನ್ನು ಬಳಸುವುದನ್ನು ತಡೆಯುವ ಪ್ರಯತ್ನಗಳ ಬಗ್ಗೆ ಕೂಡಾ ಸಿ.ಪಿ ಐ. [ಎಂ] ಮುಖ್ಯ ಚುನಾವಣಾ ಕಮಿಶನರ್ ಬಳಿ ಪ್ರತಿಭಟನೆ ಸಲ್ಲಿಸಿವೆ.

ಕಾಂಗ್ರೆಸ್ [ಐ] ಹಾಗೂ ಯು ಡಿ ಎಫ್. ತಮ್ಮ ನ್ಯಾಯ ಬಾಹಿರ ಆಚರಣೆಗಳ ಮೂಲಕ ಚುನಾವಣಾ ವಾತಾವರಣವನ್ನು ಕದಡಲು ದೃಢ ನಿರ್ಧಾರ ಮಾಡಿವೆ ಎಂಬುದು ಈ ಕ್ರಮಗಳಿಂದ ಕಂಡು ಬರುತ್ತಿದೆ. ಚುನಾವಣಾ ಆಯೋಗದ ಅಧಿಕಾರಿಗಳು ತಕ್ಷಣ ಮಧ್ಯ ಪ್ರವೇಶಿಸಿ ಚುನಾವಣಾ ನಿಯಮಗಳನ್ನು ಉಲ್ಲಂಘಿಸುವ ಈ ಘೋಷಣೆಗಳನ್ನು ರದ್ದು ಮಾಡಬೇಕೆಂದೂ ಮತ್ತು ಮುಖ್ಯಮಂತ್ರಿ, ಅವರ ಮಂತ್ರಿಮಂಡಲ ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನೂ ತರಾಟೆಗೆ ತಗೊಳ್ಳಬೇಕೆಂದು ಸಿ.ಪಿ.ಐ.[ಎಂ] ಒತ್ತಾಯಿಸಿವೆ.

ಪ. ಬಂಗಾಳದ ಎಡರಂಗ ಕೇರಳದ ಎಡ ಪ್ರಜಾಸತ್ತಾತ್ಮಕರಂಗದ ವಿಜಯಕ್ಕಾಗಿ ಶ್ರಮಿಸಿರಿ

ಕಾರಂತ ಉವಾಚ

'ಸಾಹಿತ್ಯದಲ್ಲಿ ಬೇಕಾ ಬಿಟ್ಟಿಯಾಗಿ ಗ್ರಾಮ್ಯ ಭಾಷೆ ಬಳಸುವ ಚಟ ಬೆಳೆಯುತ್ತಿದೆ ಕೊಳೆಗನ್ನಡ'ಎಂದುಕಾರಂತರು ಮಣ್ಣಿನ ನಾಳನೆಯ ಕೃತಿಗಳತ್ತ ಕೆಂಡ ಕಾರಿದರು.

ಬೆಂಗಳೂರು ವಿ.ವಿ. ಕನ್ನಡ ಅಧ್ಯಯನ ಕೇಂದ್ರ ಪ್ರತಿಭೆ-ತೌಲನಿಕ ಅಧ್ಯ ಎಂಬ ವಿಷಯದ ಬಗ್ಗೆ ಏರ್ಪಡಿಸಿದ್ದ ಮೂರು ದಿನಗಳ ವಿಚಾರ ಗೋಷ್ಠಿಯ ಉದ್ಘಾಟನೆ ಮಾಡುತ್ತಾ ಕಾರಂತರು ಕನ್ನಡದಲ್ಲಿ ಗ್ರಾಮ್ಯ ಭಾಷೆಯ ಸೊಗಡು ಇರಬೇಕಾದ ಅವಶ್ಯಕತೆಯಿಲ್ಲವೆಂಬಂತೆ ವಾದಿಸುತ್ತಾ ಕನ್ನಡ ದೇಶಕ್ಕೆ ಗ್ರಂಥಸ್ಥ ಭಾಷೆ ಬೇಕೇ ಬೇಡವೆ ಎಂಬ ಬಗ್ಗೆ ಚರ್ಚೆ ನಡೆಯಬೇಕು. ಇಲ್ಲವಾದರೆ ಬಹು ಮುಖ್ಯವಿಷಯಗಳನ್ನು ಬರೆಯುವಾಗ ತೊಂದರೆ ಎದುರಿಸಬೇಕಾಗುತ್ತದೆ.' ಎಂದು ತಮ್ಮ ತೀರ್ಮಾನವನ್ನು ಮಂಡಿಸುತ್ತಾ, 'ಮರಳಿ ಮಣ್ಣಿನ, ದಿಕ್ಕಿನಲ್ಲಿ ಯೋಚನೆ ಮಾಡುವುದೇ ತಪ್ಪೇನೋ ಎಂಬಂತೆ ಆಜ್ಞೆ ಮಾಡತೊಡಗಿದ್ದರು.

ಕಾರಂತರು ಬರೀ ಇಷ್ಟೇ ಅಣಿ ಮುತ್ತುಗಳನ್ನು ಉದುರಿಸಿದ್ದರೆ ಕಾರಂತರಿಗೆ ಕನ್ನಡದಲ್ಲಿ ಗ್ರಾಮ ಭಾಷೆ ಬಳಸುವ ಅವಶ್ಯಕತೆ ಕಂಡು ಬರುತ್ತಿಲ್ಲ ಎಂದು ಕರಾರುವಕ್ಕಾಗಿ ಹೇಳಿಬಿಡಬಹುದಿತ್ತು. ಆದರೆ ಕಾರಂತರು ಮತ್ತೆ ಮಾತನಾಡುತ್ತಾ ಸ್ವಂತದ ಅನುಭವಗಳಿಂದ ಹೂವು ತಳೆಯುವ ಸಾಹಿತ್ಯಕ್ಕೆ ಅರ್ಥವಿಲ್ಲ. ಒಬ್ಬ ಬರಹಗಾರ ತನ್ನ ಪರಿಸರದಲ್ಲಿ ಎಷ್ಟು ಜಾಗೃತವಾಗಿ ಬದುಕುತ್ತಾನೆ ಮತ್ತು ತನ್ನ ಬದುಕಿನ ಜೀವಂತಿಗೆಯನ್ನು ತನ್ನ ಬರಹದಲ್ಲಿ ಹಿಡಿದಿಡುತ್ತಾನೆ ಎಂಬುದುಮುಖ್ಯವಾದ ಅಂಶ ನಮ್ಮ ಬಡತನದ ಕಷ್ಟಗಳು ನಮ್ಮ ಅನುಭವದಿಂದ ಹೊರಹೊಮ್ಮಿದ ದೃಷ್ಟಾಂತಗಳು ಎಷ್ಟರ ಮಟ್ಟಿಗೆ ನಮ್ಮ ಬರಹದಲ್ಲಿ ಕಾಣುತ್ತವೆ ಎಂದು ಪ್ರಶ್ನಿಸಿದರು.

ಕಾರಂತರ ಪ್ರಕಾರ ಗ್ರಾಮ ಭಾಷೆ ಲೇಖಕನ ಪರಿಸರದ ಆಚೆ ನಿಲ್ಲುತ್ತದೆಯೇ ? ಒಬ್ಬ ಬರಹಗಾರ ತನ್ನ ಪರಿಸರದ, ಬದುಕು ಜೀವಂತಿಕೆಯನ್ನು ತನ್ನ ಆಡುಮಾತಿನಲ್ಲಿ, ತನ್ನ ಪರಿಸರದ ಜನ ಆಡುವ ಮಾತಿನಲ್ಲಿ ಬಳಸದಿದ್ದರೆ ಹೇಗೆ ಸಾಧ್ಯ ?. ಕಾರಂತರ ಪ್ರಕಾರ ಈ ಆಡು ಮಾತಿನ ಬಳಕೆ ಕೊಳೆಗನ್ನಡವಾದರೆ ಒಬ್ಬ ಬರಹಗಾರ ತನ್ನ ಪರಿಸರ ಬಡತನದ ಬಗ್ಗೆ ಹೇಗೆ ಬರೆಯಲು ಸಾಧ್ಯ ?

ಇಷ್ಟೆಲ್ಲಾ ಹೇಳುತ್ತಲೇ 'ನಾನು ಇತ್ತೀಚಿನವರ ಕೃತಿಗಳನ್ನು ಓದುವುದೇ ಇಲ್ಲ' ಎಂದೂ ಸಹ ಬಹಿರಂಗವಾಗಿ ಘೋಷಿಸಿದರು ಬರೀ ಗೊಂದಲಗಳನ್ನೇ ತಂಬಿಕೊಂಡು ಮಾತನಾಡಿದ ಶಿವರಾಮಕಾರಂತರು ಇಡೀ ಮೂರು ದಿನದ ಸಭೆಯಲ್ಲಿ ದೊಡ್ಡ ಪ್ರಶ್ನಾರ್ಥಕ ಚಿಹ್ನೆಯಾದರು. ಪರಿಸರದ ಬಗ್ಗೆ ಬರೆಯಬೇಕು ಆದರೆ ಅದು ಪರಿಸರ ಮಾತನಾಡುವಆಡುವಮಾತಿನಲ್ಲಿರಬಾರದುಎನ್ನುವುದಾದರೆ ಪಾಪ ಕಾರಂತರ ಚೋಮನ ತುಡಿಯ ನಾಯಕ ಚೋಮ ಸಂಸ್ಕೃತದಲ್ಲಿ ಮಾತನಾಡಲು ಸಾಧ್ಯವೇ ?

ಸಾಂಸ್ಕೃತಿಕರಂಗ

ಸಂಸ ಬಯಲು ರಂಗ ಮಂದಿರ

ರವೀಂದ್ರ ಕಲಾಕ್ಷೇತ್ರದ ಹಿಂಬಾಗದಲ್ಲಿ ಖಾಲಿ ಬಿದ್ದಿದ್ದ ಸ್ಥಳವನ್ನು ಬಯಲು ರಂಗಮಂದಿರವಾಗಿ ಬದಲು ಮಾಡುವ ಯೋಜನೆ ಜಿಡ್ಡುಗಟ್ಟಿ ಕೂತದ್ದು ಕೊನೆಗೂ ಅಂತೂ ಇಂತೂ ಪ್ರದರ್ಶನಕ್ಕೆ ಸಿದ್ಧವಾಗಿದೆ.

ಶಿವರಾಮಕಾರಂತರು ಈ ಸಂಸ ಬಯಲು ರಂಗಮಂದಿರವನ್ನು ಉದ್ಘಾಟನೆ ಮಾಡುತ್ತಾ 'ಇದರಲ್ಲೇನಿದೆ ?' ಎಂದು ಯಥಾ ಪ್ರಕಾರ ಮೂಗಳೆದ್ದರು. ನಂತರ ವಿವಿಧ ಜಿಲ್ಲೆಗಳಿಂದ ಆಯ್ದ ನಾಟಕಗಳ ನಿರಂತರ 21 ದಿನಗಳ'ರಂಗಮೇಳ' ಪ್ರಾರಂಭವಾಯಿತು.

'ಈ ರಂಗಮೇಳದಲ್ಲಿ ಸಿ. ಬಸವಲಿಂಗಯ್ಯನವರ ನಿರ್ದೇಶನದಲ್ಲಿ'ಒಂದು ಲೋಕ ಕಥೆ'ಯನ್ನು ಬೀದರ್ ಸಮುದಾಯ ಹಾಗೂ ಲಿಂಗ ದೇವರು ಹಳೇಮನೆವರ ನಿರ್ದೇಶನದಲ್ಲಿ 'ಹೈದರ್' ನಾಟಕವನ್ನು ಮೈಸೂರು ಸಮುದಾಯ ಅಭಿನಯಿಸಲಾಯಿತು.

ಬಂಡಾಯ ಘೋಷ್ಠಿ

ಮಾರ್ಚ್ 7ರಂದು ಸಂಜೆ ಪತ್ರಕರ್ತರ ಸಂಘದ ಆವರಣದಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯ ಬೆಂಗಳೂರು ಶಾಖೆ ಸಾಹಿತ್ಯವನ್ನು ಹೊಸ ದೃಷ್ಟಿಕೋನದಿಂದ ವಿಮರ್ಶಿಸುವ, ಪರಿಶೀಲಿಸುವ ನಿಟ್ಟಿನಲ್ಲಿ ಹೊಸ ಉಪನ್ಯಾಸ ಮಾಲಿಕೆಯನ್ನು ಪ್ರಾರಂಭಿಸಿತು.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಶ್ರೀ.ಸಿ. ವೀರಣ್ಣನವರು ಪ್ರಾಚೀನ ಸಾಹಿತ್ಯದ ಬಗ್ಗೆ ಈ ಮಾಲಿಕೆಯ ಮೊತ್ತ ಮೊದಲನೆಯ ಉಪನ್ಯಾಸವನ್ನು ನೀಡಿದರು.

ಡೂನ್ ಸಂಸ್ಕೃತಿ ಬೇಡ

ದೂರದರ್ಶನದಲ್ಲಿ ಡೂನ್ ಶಾಲೆ ಮತ್ತು ಸೈಂಟ್ ಸ್ಟೀಫನ್ ಶಾಲೆಗಳ ಸಂಸ್ಕೃತಿಯನ್ನು ಪ್ರಸಾರ ಮಾಡಬೇಡಿ ಎಂದು ಆಳುವ ಪಕ್ಷದ ಸದಸ್ಯರೇ ಹೇಳಿದ್ದು ಲೋಕಸಭೆಯಲ್ಲಿ ಅನೇಕರ ಹುಬ್ಬುಗಳು ಮೇಲೇರುವಂತೆ ಮಾಡಿತು.

ದೂರದರ್ಶನದಲ್ಲಿ ಪ್ರಸಾರವಾಗುತ್ತಿರುವ 'ಸುಬಹ್' ಮಾಲಿಕೆಯನ್ನು ಕುರಿತು ಲೋಕಸಭೆಯಲ್ಲಿ ಬಿಸಿಚರ್ಚೆಯಾಗುತ್ತಿದ್ದಾಗ ಈ ಮಾತು ಕತೆ ನಡೆಯಿತು.

ಸಬುಹ್‌ನಂತ ಮಾಲಿಕೆಗಳ ಮೂಲಕ ದೂರದರ್ಶನದಲ್ಲಿ ಬಿಂಬಿಸಲಾಗುತ್ತಿರುವ ದೊಡ್ಡವರ ಸಂಸ್ಕೃತಿ ಯುವಜನರ ಮೇಲೆ ಹಾನಿಕರ ಪರಿಣಾಮವನ್ನುಂಟುಮಾಡುತ್ತದೆ ಎಂದು ಮಾಜಿ ವಾರ್ತೆ ಮತ್ತು ಪ್ರಚಾರ ಸಹಾಯಕ ಸಚಿವ ಆರೀಫ್ ಮಹಮದ್ ಖಾನ್ ಟೀಕಿಸಿದರು.

ದೇಶದ ಶೇಕಡ 70 ರಷ್ಟು ಜನತೆ ದೂರದರ್ಶನದ ಕಾರ್ಯಕ್ರಮಗಳನ್ನು ವೀಕ್ಷಿಸುತ್ತಾರೆ. ಜನತೆಯ ಮೇಲೆ ಅಪಾರ ಪ್ರಭಾವ ಬೀರುವ ಈ ಮಾಧ್ಯಮವನ್ನು ಪ್ರೇಕ್ಷಕರ ಮೇಲೆ ಪ್ರತಿಕೂಲ ಪರಿಣಾಮ ಬೀರುವಂತ ಮಾಲಿಕೆಗಳನ್ನು ಪ್ರದರ್ಶಿಸಬಾರದು ಎಂದರು.

'ದೂರದರ್ಶನದ ಚಿತ್ರಮಾಲಿಕೆಗಳು ನಮ್ಮ ಜಗದ ನೈಜ ಸಂಸ್ಕೃತಿಗೆ ಅದರಲ್ಲೂ ಗ್ರಾಮೀಣ ಪ್ರದೇಶದ ಸಂಸ್ಕೃತಿಗೆ ಹೊರತಾಗಿರಬಾರದು' ಎಂದು ಹೇಳಿದರು.

ಜಿ. ಎನ್. ಮೋಹನ್

ಲೋಕಸಭೆಯಲ್ಲಿ ವಾಗ್ಯುದ್ಧ

ಸಮಾಜವಾದ ಎಂದರೇನು ? ಎಂಬ ಬಗ್ಗೆ ವಾಗ್ಯುದ್ಧದ ಕೆಲವು ತುಣುಕುಗಳನ್ನು ಓದಿದ್ದೀರಿ. ಮುಂದಿನ ಭಾಗಗಳನ್ನು ಓದಿ

ರಾಜೀವ ಗಾಂಧಿ :– ಪಂಡಿತ್‌ಜೀ ಅವರು ಸಮಾಜವಾದದ ಬಗ್ಗೆ ಮಾನ್ಯ ಸದಸ್ಯರಿಗೆ ತಿಳಿದಿದ್ದರೆ ಅವರು ಕಾಂಗ್ರೆಸ್‌ನವರಾಗುತ್ತಿದ್ದರು.

ಸಮರ ಮುಖರ್ಜಿ :– ನಾನೂ ಕಾಂಗ್ರೆಸ್ಸಿನವನಾಗಿದ್ದೆನೆಂಬುದನ್ನು ತಿಳಿಯ ಬೇಕು. ಕಾಂಗ್ರೆಸ್ಸಿನೊಳಗಿದ್ದೇ ನಾನು ಕಮ್ಯುನಿಸ್ಟನಾದೆ ಮತ್ತು ಒಂದು ಪಕ್ಷವಾಗಿಯೇ ನಾವು ಕಾಂಗ್ರೆಸ್ಸಿನಿಂದ ಹೊರಬಿದ್ದೆವು.

ರಾಜೀವ್ ಗಾಂಧಿ :– ಯಾವ ವರ್ಷ ?

ಸಮರ ಮುಖರ್ಜಿ :- 1944ರಲ್ಲಿ ನಾವು ಕಮ್ಯುನಿಸ್ಟರಾಗಿ ಕಾಂಗ್ರೆಸ್‌ನಿಂದ ಹೊರಬಿದ್ದೆವು.

ರಾಜೀವ್ ಗಾಂಧಿ :– ಕಾಂಗ್ರೆಸ್ ಚಳುವಳಿಯ ಕೊನೆ ವರ್ಷಗಳಲ್ಲಿ ಯಾವ ಪಕ್ಷಗಳು ಯಾರಿಗೆ ಸಹಾಯ ಮಾಡಿದವು ಎಂಬ ಅಂಶವನ್ನು ನಾನು ಎತ್ತುವುದಿಲ್ಲ.

ಸಮರ ಮುಖರ್ಜಿ :– ಒಂದು ದಿವಸ ಸಮತಾವಾದದ ಕುರಿತು ಚರ್ಚೆ ನಡೆಯಬೇಕೆಂದು ನಾನು ಸೂಚಿಸುತ್ತೇನೆ.

ರಾಜೀವ್ ಗಾಂಧಿ :– ಸ್ವತಂತ್ರ್ಯ ಚಳುವಳಿಸಂಧಿಗ್ಧ ಪರಿಸ್ಥಿತಿಮುಟ್ಟಿದಾಗ ಕೆಲವು ಪಕ್ಷಗಳು ಅಂಥಪರಿಸ್ಥಿತಿಯನ್ನು ಮುಟ್ಟುಗೋಲು ಹಾಕಲು ಯಾರಿಗೆ ಸಹಾಯ ಮಾಡಿದವು. ಕಾಂಗ್ರೆಸ್‌ನ್ನು ಬಿಟ್ಟು........

ಸುಕೋಮಲ್ ಸೇನ್ :– ದಯ ಮಾಡಿ ಚರಿತ್ರೆಯನ್ನು ಓದಿರಿ.

ರಾಜೀವ್ ಗಾಂಧಿ :– ದುರಾದೃಷ್ಟದಿಂದ ಆ ಪ್ರಶ್ನೆಯನ್ನು ಯಾರೂ ಉತ್ತರಿಸಲಿಲ್ಲ........

ಸಮರ ಮುಖರ್ಜಿ :– ಸಮಾಜವಾದ ಮತ್ತು ತಂತ್ರಜ್ಞಾನ ಎರಡನ್ನೂ ಸೇರಿಸಿರೆಂದು ನಾನು ಹೇಳಿದ್ದೇನೆ. ನಾನು ತಂತ್ರಜ್ಞಾನದ ವಿರೋಧಿಯಲ್ಲ. ಇವೆರಡನ್ನೂ ಒಟ್ಟಿಗೆ ಸೇರಿಸಿರೆಂದು ನಾನು ನಿಮಗೆ ಹೇಳಿದ್ದೆ. ಇಲ್ಲವಾದರೆ ನಿರುದ್ಯೋಗಿಗಳ ದೊಡ್ಡ ಸಂಖ್ಯೆ ಉಂಟಾಗುತ್ತದೆ.

ರಾಜೀವಗಾಂಧಿ:– ನನಗೂ ಒಂದು ಅವಕಾಶಕೊಡಿ. ತಮ್ಮ ಪಾದಗಳನ್ನು

ಪ್ರಧಾನಿಯವರಿಗೆ ಸಮಾಜ ವಾದವೆಂದರೇನೆಂಬುದು ತಿಳಿಯದಿರುವುದು ದುರದೃಷ್ಟಕರ.

ಸುಕುಮೋಲ್ ಸೇನ್

ಮೋಸ್ಕೊದಲ್ಲಿ ಭದ್ರವಾಗಿ ಇಟ್ಟಿರುವ ಮಾನ್ಯ ಸದಸ್ಯರು ಪಂಡಿತ್‌ಜೀ ಅವರೆ ಭಾರತಕ್ಕೆ ಬರಲಿ. ಪಂಡಿತ್‌ಜೀ ಅವರ ಭಾರತಕ್ಕೆ ಬರಲು ಅವರಿಗೆ ಇಚ್ಛೆ ಇಲ್ಲದಿದ್ದರೆ, ಕನಿಷ್ಟ ಪಕ್ಷ ಗೋರ್ಬೋಚೆವ್ ಅವರನೋಸ್ಕೋಕ್ಕಾದರೂ ಹೋಗಲಿ.

ಸಮರ ಮುಖರ್ಜಿ :- ಮೊನ್ನೆತಾನೆ 28 ರಂದೇ ನಾನು ಮೋಸ್ಕೊದಿಂದ ವಾಪಸ್ಸಾಗಿದ್ದೇನೆ. ಈ ತರದ ಮಾತನ್ನಾಡಬೇಡಿ ಗಂಭೀರವಾದ ಚರ್ಚೆ ನಡೆಸುವ ಪ್ರಧಾನಮಂತ್ರಿಯವರಿಂದ ಹಗುರವಾದ ಮಾತುಗಳುಹೊರಬರಬಾರದು. ಸುಕುಮೋಲ್ ಸೇನ್; ಅವರಿಗೆ ಸಮಾಜವಾದವೆಂದರೇನೆಂಬುದ ತಿಳಿಯದಿರುವುದು ದುರದೃಷ್ಟಕರ.

ಸಮರ ಮುಖರ್ಜಿ :– ನಾನಿದ್ದ ಸಭೆಯಲ್ಲಿ ಗೊರ್ಬೊಚೇವ್ ಕೂಡ ಸ್ವತಃ ಹಾಜರಿದ್ದರು.

ಎಲ್ಲರಿಗೂ ಶಿಕ್ಷಣ ಏನಾಯಿತು ?

ಸಮರ ಮುಖರ್ಜಿ :– ಸಂವಿಧಾನದಲ್ಲಿ ಹೇಳಿದಂತೆ ಪುಕ್ಕಟೆ ಒತ್ತಾಯದ ಶಿಕ್ಷಣ ಏನಾಯಿತು ?

ರಾಜೀವಗಾಂಧಿ :- ಶಿಕ್ಷಣದಲ್ಲಿ ಮತ್ತೊಂದು ಮುಖ್ಯ ಅಂಶವಿದೆ. ತಮ್ಮ ಶಿಕ್ಷಣ ಪದ್ಧತಿಯಲ್ಲಿ ಕೆಲವು ರಾಜ್ಯಗಳು ರಾಷ್ಟ್ರೀಯತೆಯನ್ನೇ ಕಲಿಸುವುದಿಲ್ಲ.

ಸಮರ ಮುಖರ್ಜಿ :– ಇದು ಸಂವಿಧಾನವಿತ್ತ ಜವಾಬ್ದಾರಿ ಎಂದು ಹೇಳುತ್ತೀರಿ. ಹತ್ತು ವರ್ಷದೊಳಗೆ ಇಡೀ ದೇಶದಲ್ಲಿ ಪುಕ್ಕಟೆ ಪ್ರಾಥಮಿಕ ಶಿಕ್ಷಣ ಸಿಗಬೇಕು. ಈಗ ಇಡೀ ಪ್ರಶ್ನೆಯನ್ನು ಬೇರೆಡೆಗೆ ಎಳೆಯುತ್ತೀರಿ. ನೀತಿ ನಿಲುವುಗಳ ಪ್ರಶ್ನೆಯನ್ನೆತ್ತುತ್ತಿದ್ದೀರಿ.

ರಾಜೀವ ಗಾಂಧಿ :– ಅದನ್ನೇ ನಾನು ಹೇಳಿದ್ದು ಮಾನ್ಯ ಸದಸ್ಯರೇ ಹೇಳಿದಂತೆ, ಪಶ್ಚಿಮ ಬಂಗಾಲದಂತ ಸರಕಾರಗಳು ಇದನ್ನು ಬಿಟ್ಟಿವೆ.

ಸಮರ ಮುಖರ್ಜಿ :– ಮಾಧ್ಯಮಿಕ ಮಟ್ಟದವರೆಗೆ ನಾವು ಪುಕ್ಕಟೆ ಶಿಕ್ಷಣ ಒದಗಿಸುತ್ತೇವೆ. ನೀವು ಉತ್ತರ ಕೊಡಲು ತಪ್ಪಿಸುತ್ತಿದ್ದೀರಿ.

ಡಿ. ವೈ. ಎಫ್. ಐ. ಬಿಜಾಪುರ ಜಿಲ್ಲಾ ಸಮ್ಮೇಳನ

ಬಿಜಾಪುರ ಡಿ. ವೈ. ಎಫ್. ಐ. ಪ್ರಥಮ ಜಿಲ್ಲಾ ಸಮ್ಮೇಳನವು 9.3.87 ರಂದು ಬಿಜಾಪುರದಲ್ಲಿ ನಡೆಯಿತು.

ರಾಜ್ಯ ಕಾರ್ಯದರ್ಶಿ, ಎಸ್. ಶಿವರಾಂರವರು ಧ್ವಜಾರೋಹಣ ಮಾಡಿದರು. ಕರ್ನಾಟಕಪ್ರಾಂತ ರೈತಸಂಘದ ಜಿಲ್ಲಾ ಖಜಾಂಚಿಗಳಾದಕಾ.ಆರ್ ಹೆಚ್ ಕಲಾದಗಿ ಮಾಸ್ತರ್‌ರವರು ಉದ್ಘಾಟಿಸಿದರು. ಉದ್ಘಾಟನಾ ಸಮಾರಂಭಕ್ಕೆ ನಗರದ ಗಣ್ಯವ್ಯಕ್ತಿಗಳು ಹಾಗೂ ಎಸ್. ಎಫ್.ಐ. ನಿಂದ ಶುಭ ಕೋರಿದರು.

ಈ ಸಮ್ಮೇಳನಕ್ಕೆ ಕಾ.ಮುನ್ನೂಸಾಭಕಲಾದಾಗಿ ಕಾ.ಸದಾನಂದ ಮೋಧಿ ಕಾ. ನದಾಫ್ ಇವರುಗಳು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಂಚಾಲಕರಾದ ಕಾ. ಅಣ್ಣಾರಾಯ ಈಳಗೇರರವರು ವರದಿ ಮಂಡಿಸಿ ಮಾತನಾಡಿದರು. ವರದಿಯ ಮೇಲೆ ಚರ್ಚೆಯಲ್ಲಿ ಸುಮಾರು 10 ಜನ ಪ್ರತಿನಿಧಿಗಳು ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಎಸ್.ಶಿವರಾಂರವರು ಜಿಲ್ಲೆಯಲ್ಲಿ ಸಂಘಟನೆಯನ್ನು ಬೆಳೆಸುವುದರ ವಿಷಯವಾಗಿ ಸಂಘಟನೆಯ ಧ್ಯೇಯೋದ್ದೇಶಗಳನ್ನು ತಿಳಿಸಿದರು.

ಹದಿನೈದು ಜನರ ಜಿಲ್ಲಾ ಸಮಿತಿಯಲ್ಲಿ ಅಣ್ಣಾರಾಯ ಈಳಗೇರರವರು ಅಧ್ಯಕ್ಷರಾಗಿ, ಸದಾನಂದ ಮೋಧಿ ಅವರು ಕಾರ್ಯದರ್ಶಿ, ನದಾಫ್‌ರವರುಸಹ ಕಾರ್ಯದರ್ಶಿಯಾಗಿ ಮಂಡಲ್‌ಪಂಚಾಯತ್ ಸದಸ್ಯರಾಗಿ ಆಯ್ಕೆಯಾಗಿರುವ ಕಾ. ಬೆಳಗಲಿ ಅವರು ಖಜಾಂಚಿಯಾಗಿ ಸಮ್ಮೇಳನವು ಆಯ್ಕೆ ಮಾಡಿತು.

ಸಮ್ಮೇಳನದ ನಂತರ ಸಂಜೆ ಬಸವವೃತ್ತದಲ್ಲಿ ಬೃಹತ್ ಬಹಿರಂಗ ಸಭೆ ನಡೆಸಲಾಯಿತು. ಜಿಲ್ಲಾ ಅಧ್ಯಕ್ಷರಾದ ಕಾ. ಅಣ್ಣಾರಾಯರವರು ಅಧ್ಯಕ್ಷತೆ ವಹಿಸಿದರು. ಉಪಧ್ಯಕ್ಷರಾದ ಕಾ. ಮುನ್ನೂಸಾಭರವರು ಸ್ವಾಗತಿಸಿದರು. ರಾಜ್ಯ ಕಾರ್ಯದರ್ಶಿ ಎಸ್. ಶಿವರಾಂ ಪ್ರಾಂತ ರೈತ ಸಂಘದ ಮುಖಂಡರಾದ ಕಾ.ಭೀಮಸಿ ಕಲಾದಗಿ ಅವರು ನೆರೆದಿದ್ದ ಸುಮಾರು ಸಾರ್ವಜನಿಕರನ್ನೂದ್ದೇಶಿಸಿ ಭಾಷಣ ಮಾಡಿದರು. ರಾಜ್ಯಸಮಿತಿಯ ಸದಸ್ಯರಾದ ಕಾ. ಚಿದಾನಂದ ತೆಗ್ಗಿಹಳ್ಳಿರವರು ಶುಭಾಶಯಕೋರಿದರು. ಅಣ್ಣಾರಾಯರು ಸಮ್ಮೇಳನದ ನಿರ್ಣಯಗಳನ್ನು ಓದಿದರು, ಕುಲಕ್ ಅವರು ವಂದಿಸಿದರು.

ತಾಲ್ಲೂಕು ಸಮ್ಮೇಳನ

8.3.87 ರಂದು ಸಿಂದಗಿಯಲ್ಲಿ ತಾಲ್ಲೂಕ್ ಸಮ್ಮೇಳನ ನಡೆಯಿತು. ರಾಜ್ಯ ಕಾರ್ಯದರ್ಶಿ ಎಸ್. ಶಿವರಾಂ ಉದ್ಘಾಟಿಸಿದರು. ತಾಲ್ಲೂಕು ಸಂಚಾಲಕ ಅಣ್ಣಾರಾಯ ಈಳಗೇರರವರು ವರದಿ ಮಂಡಿಸಿ ಮಾತನಾಡಿರು. ಸಮ್ಮೇಳನಕೆ 40 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. 10 ಜನರ ತಾಲ್ಲೂಕ್ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಹಿಂದೂ-ಸಿಖ್ ಐಕ್ಯತೆಯತ್ತ ಮಹತ್ವದ ಹೆಜ್ಜೆ ರಾಜಕೀಯ ಪಕ್ಷಗಳ ಸಾಮೂಹಿಕ ಯತ್ನ

ಲೂಧಿಯಾನಾದ ರ್‍ಯಾಲಿ

“ಆಪರೇಶನ್ ಬ್ಲೂಸ್ಟಾರ್”ನಂತರ ದೀರ್ಘಕಾಲ ತಮ್ಮ ರಾಜ್ಯದಲ್ಲಿ ಪ್ರತ್ಯೇಕವಾದಿ ಭಯೋತ್ಪಾದಕರ ಕರಾಳ ಕೃತ್ಯಗಳನ್ನು ಮೂಕರಾಗಿ ನೋಡುತ್ತಿದ್ದ ಪಂಜಾಬಿನ ಜನತೆ ಮಾರ್ಚ್ 9ರಂದು ಮೊತ್ತಮೊದಲ ಬಾರಿಗೆ ತಮ್ಮ ದನಿಯೆತ್ತಿ ದೇಶದ ಐಕ್ಯತೆಯನ್ನು ಒಡೆಯಲು ಭಯೋತ್ಪಾದಕರಿಗೆ ಅವರ ಸಾಮ್ರಾಜ್ಯಶಾಹೀ ಯಜಮಾನರಿಗೆ ಅವಕಾಶ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಸಾರಿದರು.

ಭಯೋತ್ಪಾದಕರ ವಿರುದ್ಧ ವ್ಯಾಪಕ ರಾಜಕೀಯ ಚಳುವಳಿ-ಮುಖ್ಯವಾಗಿ ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ಆಳುವ ಪಕ್ಷಗಳ ಪಾಲುಗೊಂಡ ಚಳುವಳಿ- ಇದ್ದಿದ್ದರೆ ಪಂಜಾಬಿ ಜನತೆಯ ಬೆಂಬಲದೊಂದಿಗೆ ಎಂದೋ ಪ್ರತ್ಯೇಕತಾವಾದಿಗಳನ್ನು ಸಮರ್ಥವಾಗಿ ಎದುರಿಸಬಹುದಾಗಿತ್ತು ಎಂಬುದನ್ನು ಮಾರ್ಚ್ 9 ರಂದು ಲುಧಿಯಾನಾದಲ್ಲಿ ಅಪಾರ ಜನಸಮೂಹ ಹುಮ್ಮಸ್ಸಿನಿಂದ ಭಾಗವಹಿಸಿದ ಬೃಹತ್ ರ್‍ಯಾಲಿ ತೋರಿಸಿಕೊಟ್ಟಿದೆ.

ಫೆಬ್ರುವರಿ 20ರಂದು ಲೋಂಗೋವಾಲ್ ಗ್ರಾಮದಲ್ಲಿ ಸಮಾವೇಶ ನಡೆಯುವವರೆಗೆ ಪಂಜಾಬಿನ ಪೋಲೀಸ್ ಮಹಾನಿರ್ದೇಶಕ ರೆಬೆರೋ ಕೂಡಾ ಒಪ್ಪಿರುವಂತೆ ಕೇವಲ ಎಡಪಕ್ಷ ಅಷ್ಟೇ ಜನತೆಯ, ದುಡಿಮೆಗಾರರ ಐಕ್ಯತೆಗಾಗಿ ಹೋರಾಟದ ಕಣದಲ್ಲಿದ್ದವು. ಈಗ ಈ ಹೋರಾಟ ವ್ಯಾಪಕಗೊಂಡು ಹೊಸ ತಿರುವು ಪಡೆದಂತಾಗಿದೆ.

ಭಯೋತ್ಪಾದಕರು ಧ್ವನಿವರ್ಧಕಗಳಿಂದ ಸಜ್ಜಿತವಾದ ಜೀಪುಗಳಲ್ಲಿ ಹಲವಾರು ಹಳ್ಳಿಗಳಲ್ಲಿ ಲುಧಿಯಾನದ ರ್‍ಯಾಲಿಯಲ್ಲಿ ಭಾಗವಹಿಸುವವರು ತೀವ್ರ ಪರಿಣಾಮ ಎದುರಿಸಬೇಕಾಗಬಹುದೆಂದು ಬೆದರಿಕೆ ಹಾಕಿದರೂ ಲೆಕ್ಕಿಸದೆ ಪಂಜಾಬಿನ ಎಲ್ಲಾ ಜನ-ಕಾರ್ಮಿಕರು, ರೈತರು, ಕೃಷಿಕಾರ್ಮಿಕರು, ಯುವಕರು ವಿದ್ಯಾರ್ಥಿಗಳು, ಬುದ್ಧಿಜೀವಿಗಳು, ಸಣ್ಣ ವ್ಯಾಪಾರಸ್ಥರು-ಲಕ್ಷ-ಲಕ್ಷ ಸಂಖ್ಯೆಯಲ್ಲಿ ಲೂಧಿಯಾನದ ಗುರುನಾನಕ್ ಕ್ರೀಡಾಂಗಣದಲ್ಲಿ ನಡೆದ ರ್‍ಯಾಲಿಯಲ್ಲಿ ಅತ್ಯುತ್ಸಾಹದಿಂದ ಭಾಗವಹಿಸಿದರು; ದಿನವಿಡೀ ಕೂತು ದೇಶದ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರ ಮಾತುಗಳನ್ನು ಸುಡುಬಿಸಿಲನ್ನೂ ಲೆಕ್ಕಿಸದೆ ಆಲಿಸಿದರು; ಒಕ್ಕೊರಲಿನಿಂದ ಕಿವಿಗಡಚಿಕ್ಕುವಂತೆ ಪ್ರತ್ಯೇಕತಾವಾದಿಗಳ ವಿರುದ್ಧ, ದೇಶದ, ರಾಜ್ಯದ ಜನತೆಯ, ಐಕ್ಯತೆಯ ಘೋಷಣೆ ಕೂಗಿದರು; ಖಲಿಸ್ತಾನ ಘೋಷಣೆಗೆ ತಮ್ಮ ವಿರೋಧವನ್ನು ಕೈಯೆತ್ತಿ ಸಾರಿದರು. ಸಭೆಯಲ್ಲಿ ಅಪಾರ ಸಂಖ್ಯೆಯಲ್ಲಿ ಮಹಿಳೆಯರು ಕೂಡಾ ಭಾಗವಹಿಸಿದ್ದುದು ಗಮನಾರ್ಹವಾಗಿತ್ತು.

ಸಿ.ಪಿ.ಐ.[ಎಂ] ಪಾಲಿಟ್ ಬ್ಯೂರೋ ಸದಸ್ಯ ಕಾಂ. ಹರಿಕಿಶನ್ ಸಿಂಗ್ ಸುರ್ಜಿತ್‌ರ ಭಾಷಣದೊಂದಿಗೆ ಆರಂಭವಾದ ಬೃಹತ್ ಸಭೆಯಲ್ಲಿ ಮುಖ್ಯಮಂತ್ರಿ ಬರ್ನಾಲಾ ಮತ್ತು ಹಣಕಾಸು ಮಂತ್ರಿ ಬಲವಂತ ಸಿಂಗ್‌ರಲ್ಲದೆ ಸಿ.ಪಿ.ಐ., ಕಾಂಗ್ರೆಸ್(ಐ), ನ್ಯಾಶನಲ್ ಕಾನ್ಫರೆನ್ಸ್(ಫಾರೂಕ್), ಎ.ಐ.ಎ.ಡಿ.ಎಂ.ಕೆ., ಲೋಕದಳ, ಬಿಜೆಪಿ ಹಾಗೂ ಎ.ಜಿ.ಪಿ. ಮುಖಂಡರು ಮಾತನಾಡಿದರು.

ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಿದ ನಿರ್ಣಯ ಪಂಜಾಬಿನಲ್ಲಿ ಭಯೋತ್ಪಾದಕರ, ಕೋಮುವಾದಿಗಳ ಕರಾಳ ಕೃತ್ಯಗಳನ್ನು ತೀವ್ರವಾಗಿ ಖಂಡಿಸಿ ಪ್ರತ್ಯೇಕತಾವಾದದ ಭಯೋತ್ಪಾದಕತೆಯ ವಿರುದ್ಧ ಹೋರಾಟದಲ್ಲಿ ಬರ್ನಾಲಾ ಹಾಗೂ ಅವರ ಸರಕಾರದ ಧೈರ್ಯದ ನಿಲುವಿಗೆ ಬೆಂಬಲ ನೀಡಿತು. ಈ ಹೋರಾಟದಲ್ಲಿ ಪಂಜಾಬೀ ಜನತೆಗೆ ಸಮಸ್ತ ದೇಶದ ಜನತೆಯ ಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿತು.

ಈಗಲಾದರೂ ಕೇಂದ್ರ ಸರಕಾರ ಕಾಂ. ಸುರ್ಜಿತ್ ಹೇಳಿದಂತೆ ಪಂಜಾಬ್ ಒಪ್ಪಂದವನ್ನು ಜ್ಯಾರಿಗೆ ತರುವಲ್ಲಿ ತನ್ನ ಪ್ರಾಮಾಣಿಕತೆಯನ್ನು ಸಿದ್ಧಪಡಿಸಬೇಕು, ಯಾವ ಆಪಾದನೆಯೂ ಇಲ್ಲದ ಜೋಧಪುರ ಬಂಡಿಗಳನ್ನು ಬಿಡುಗಡೆ ಮಾಡಿ, ನಿರ್ಲಕ್ಷದ ನಿಲುವನ್ನು ಬಿಟ್ಟುಕೊಟ್ಟು ಪ್ರತ್ಯೇಕತಾವಾದದ ವಿರುದ್ಧ ಆಂದೋಲನ ಮುನ್ನಡೆ ಸಾಧಿಸುವಂತೆ ಅವಕಾಶವಾಗಬೇಕಾಗಿದೆ.

ಜಮ್ಮು - ಕಾಶ್ಮೀರ ಚುನಾವಣೆ

ಸಿ. ಪಿ. ಐ. (ಎಂ) ಮನವಿ

ಮಾರ್ಚ್ 23 ರಂದು ಜಮ್ಮು ಕಾಶ್ಮೀರದಲ್ಲಿ ನಡೆಯುವ ವಿಧಾನಸಭಾ ಚುನಾವಣೆಗಳಲ್ಲಿ ಸಿ. ಪಿ. ಐ. [ಎಂ] ಹಾಗೂ ಇತರ ಎಡಪಕ್ಷಗಳು ಮತ್ತು ಜಾತ್ಯಾತೀತ ವಿರೋಧಪಕ್ಷಗಳ ಪ್ರತಿನಿಧಿಗಳ ಸಂಖ್ಯೆ ವಿಧಾನಸಭೆಯಲ್ಲಿ ಹೆಚ್ಚುವಂತೆ ತಮ್ಮ ಮತ ಚಲಾಯಿಸಬೇಕೆಂದು ಸಿ. ಪಿ. ಐ. [ಎಂ] ಜಮ್ಮು ಕಾಶ್ಮೀರ ರಾಜ್ಯಸಮಿತಿ ರಾಜ್ಯದ ಮತದಾರರನ್ನು ಮನವಿ ಮಾಡಿಕೊಂಡಿದೆ. ದೇಶದಲ್ಲಿ ಕೋಮುವಾದಿ ಹಾಗೂ ಪ್ರತ್ಯೇಕತಾವಾದಿ ಶಕ್ತಿಗಳು ದೇಶಾದ್ಯಂತ ಸಕ್ರಿಯರಾಗಿರುವ ಸಂದರ್ಭದಲ್ಲಿ ಈ ಚುನಾವಣೆ ನಡೆಯಲಿದ್ದು, ಜಮ್ಮು-ಕಾಶ್ಮೀರದಲ್ಲಿ ಈ ಶಕ್ತಿಗಳಿಗೆ ಸಿಗುವ ಯಾವುದೇ ಪ್ರೋತ್ಸಾಹ ದೇಶದ ಜಾತ್ಯಾತೀತ, ಪ್ರಜಾಪ್ರಭುತ್ವವಾದೀ ಆಂದೋಲನದ ಸೋಲು, ಕೋಮುವಾದಿಗಳು ಮತ್ತು ಪ್ರತ್ಯೇಕತಾವಾದಿಗಳಿಗೆ ನೀಡುವ ಒಂದೊಂದು ಮತವೂ ದೇಶವನ್ನು ಹೋಳು ಹೋಳಾಗಿಸಬೇಕೆನ್ನುವ ಸಾಮ್ರಾಜ್ಯಶಾಹಿಗಳ ಕೈಗಳನ್ನು ಬಲಪಡಿಸುತ್ತವೆ ಎಂದು ಸಿ.ಪಿ.ಐ. [ಎಂ] ತನ್ನ ಮನವಿಯಲ್ಲಿ ಮತದಾರರನ್ನು ಜಾಗೃತಗೊಳಿಸಿದೆ.

ಜಮ್ಮು-ಕಾಶ್ಮೀರದ ಚುನಾವಣೆಗಳಲ್ಲಿ ಈಗ ಮೂರು ಬಣಗಳಿವೆ. ಮೊದಲನೆಯದು, ಕೇಂದ್ರ ಸರ್ಕಾರ ರಾಜ್ಯದ ಜನತೆಯ ಮೇಲೆ ಹೇರಿರುವ ನ್ಯಾಶನಲ್ ಕಾನ್ಫರೆನ್ಸ್-ಕಾಂಗ್ರೆಸ್ ಕೂಟ, ಎರಡನೆಯದು, ಕೋಮುಬಣ-ಕಾಶ್ಮೀರ ಕಣಿವೆಯಲ್ಲಿ ಮುಸ್ಲಿಂ ಮೂಲಭೂತವಾದ ಪಾಕಿಸ್ತಾನದ ಸರ್ವಾಧಿಕಾರಿಯನ್ನು ಬೆಂಬಲಿಸುವ, ಅಲ್ಲಿಯ ಪ್ರಜಾಪ್ರಭುತ್ವ ಆಂದೋಲನವನ್ನು ವಿರೋಧಿಸುವ ಜಮಾತ್-ಎ-ಇಸ್ಲಾಮಿ ನೇತೃತ್ವದ ಮುಸ್ಲಿಂ ಸಂಯುಕ್ತರಂಗ ಹಾಗೂ ಜಮ್ಮುವಿನಲ್ಲಿ ಹಿಂದೂ ಕೋಮುವಾದ ಹರಡಿ ಕಾಶ್ಮೀರ ಕಣಿವೆಯ ಮುಸ್ಲಿಂ ಕೋಮುವಾದಿಗಳನ್ನು ಬಲಪಡಿಸುತ್ತಿರುವ ಭಾರತೀಯ ಜನತಾ ಪಾರ್ಟಿ ಹಾಗೂ ಮೂರನೆಯದು, ಬಣ- ಎಡಪಕ್ಷಗಳಾದ ಸಿ.ಪಿ ಐ. [ಎಂ] ಮತ್ತು ಸಿ.ಪಿ ಐ. ಈ ಕೂಟ ಕಾಶ್ಮೀರ ಪ್ರದೇಶದಲ್ಲಿ ಹಾಗೂ ಜಮ್ಮು ಪ್ರದೇಶದಲ್ಲಿ ರಿಯಾಸಿ ಕ್ಷೇತ್ರದಲ್ಲಿ ಒಟ್ಟು 3 ಅಭ್ಯರ್ಥಿಗಳನ್ನು ನಿಲ್ಲಿಸಿದೆ.

ಮೇಲೆ ಹೇಳಿದ ಎರಡನೆಯ ಬಣ ದುಡಿಯುವ ಜನರ ಐಕ್ಯತೆಯನ್ನು ಒಡೆಯುವುದರಿಂದ ಅದನ್ನು ಸಂಪೂರ್ಣವಾಗಿ ಸೋಲಿಸಿ, ಸಿ.ಪಿ ಐ.[ಎಂ], ಸಿ.ಪಿ.ಐ., ಜನತಾ ಹಾಗೂ ಲೋಕದಳದ ಅಭ್ಯರ್ಥಿಗಳನ್ನು ಗೆಲ್ಲಿಸಿ, ಈ ಪಕ್ಷದ ಅಭ್ಯರ್ಥಿಗಳಿಲ್ಲದಲ್ಲಿ ಕೋಮುವಾದಿಗಳ ವಿರುದ್ಧ ನ್ಯಾಶನಲ್ ಕಾನ್ಫರೆನ್ಸ್ ಅಭ್ಯರ್ಥಿಗಳಿಗೆ ಮತ ನೀಡಬೇಕೆಂದೂ, ಕೋಮುವಾದಿಗಳಿಗೆ, ಪ್ರತ್ಯೇಕತಾವಾದಿಗಳಿಗೆ ಬೆಳೆಯಲು ಅಸ್ಪದ ನೀಡಿದ ಕಾಂಗ್ರೆಸ್ [ಐ] ಗೂ ಪಕ್ಷ ಮತದಾರರನ್ನು ವಿನಂತಿಸಿಕೊಂಡಿದೆ.

ವಿಶ್ವಶಾಂತಿ ಹಾಗೂ ಮಹಿಳೆ

ವಿಶ್ವದಾದ್ಯಂತ ಇಂದು ವಿನಾಶದ ಭೀತಿ, ಅಣುಸಮರದ ಭೀತಿ ಹಬ್ಬುತ್ತಿದೆ. ಈ ಬಗ್ಗೆ ತಾಯಂದಿರು ಸೋದರಿಯರು ಕಳವಳ ಗೊಂಡಿದ್ದಾರೆ.

ಜಗತ್ತಿನೆಲ್ಲೆಡೆ ಮಹಿಳೆಯರು ಈ ಬಗ್ಗೆ ಮಾಡುತ್ತಿರುವ ಹೋರಾಟಗಳನ್ನು ವಿವರಿಸುತ್ತಾರೆ ಮಹಿಳಾ ಸಂಘಟನೆಯ ಕೇಂದ್ರ ಸಮಿತಿ ಸದಸ್ಯೆ ಕಾ|| ಹರಿಣಿಕಕ್ಕೇರಿಯವರು

ಪ್ರಪಂಚದಾದ್ಯಂತ ಸಾಮ್ರಾಜ್ಯಶಾಹಿಗಳ ವಿರುದ್ಧ ನಡೆಯುತ್ತಿರುವ ಅನೇಕ ಹೋರಾಟಗಳಲ್ಲಿ ಮಹಿಳೆಯರೂ ಪುರುಷರ ಸರಿಸಮಾನರಾಗಿ ಭಾಗವಹಿಸುತ್ತಿದ್ದಾರೆ. ದಕ್ಷಿಣ ಆಫ್ರಿಕಾದ ಕರಿಯರ ಸ್ವಾತಂತ್ರ್ಯ ಹೋರಾಟವನ್ನು ದಮನಗೊಳಿಸುತ್ತಿರುವ ಬೋಥಾನ ಸರ್ಕಾರದ ವಿರುದ್ಧ ನೆಲ್ಸನ್ ಮಾಂಡೆಲಾರವರ ಪತ್ನಿ ವಿನ್ನಿ ಮಾಂಡೆಲಾರವರು, ಮಹಿಳೆಯರನ್ನು ಬಹುದೊಡ್ಡ ಮಟ್ಟದಲ್ಲಿ ಸಂಘಟಿಸಿ ದೊಡ್ಡ ಚಳುವಳಿಯನ್ನೇ ನಡೆಸುತ್ತಿದ್ದಾರೆ. ಎಲ್ಲಾ ಸ್ತರದ ಮಹಿಳೆಯರೂ ಒಂದಾಗಿ ಮೇ 1, ಮತ್ತು ಜೂನ್ 16, 1986 ರಂದು ದೊಡ್ಡ ಮಟ್ಟದಲ್ಲಿ ಪ್ರತಿಭಟಿಸಿದುದಲ್ಲದೆ, ಆಗಸ್ಟ್ 9ರಂದು “ಆಫ್ರಿಕನ್ ಮಹಿಳೆಯರ ದಿನಾಚರಣೆ”ಯನ್ನು ರಾಷ್ಟ್ರಮಟ್ಟದಲ್ಲಿ ಆಚರಿಸಿ ಗೃಹಿಣಿಯರೆಲ್ಲಾ ಸೇರಿ ಆರು ತಿಂಗಳ ಕಾಲ ‘ಬಾಡಿಗೆ ಇಲ್ಲ’ [no rent] ಚಳುವಳಿಯನ್ನು ನಡೆಸಿದಾಗ ಇದನ್ನು ಮುರಿಯಲು ಸರ್ಕಾರವು ಸೈನಿಕರನ್ನು ಕಳಿಸಬೇಕಾಯಿತು. ಸರ್ಕಾರವನ್ನೆಚ್ಚರಿಸಲು ಈ ಮಹಿಳೆಯರು ಹಾಡಿದ ಹಾಡು ಬಹಳ ಜನಪ್ರಿಯವಾಯಿತು.

“ನೀವೀಗ ಮಹಿಳೆಯರನ್ನು
ಕೆಣಕಿರುವಿರಿ
ಬಂಡೆಗಲ್ಲೊಂದ ಹಾಯ್ದಿರುವಿರಿ
ಗುಂಡುಗಲ್ಲೊಂದು ಉರುವಂತೆ
ಮಾಡಿರುವ ನೀವು
ನುಚ್ಚು ನೂರಾಗುವಿರಿ”

ಇದೇ ರೀತಿ ಪಾಕಿಸ್ತಾನದ ಮಹಿಳೆ ಇಂದು ಜನರಲ್ ಝಿಯಾರ ರಾಕ್ಷಸೀ ಮಿಲಿಟರೀ ಸರ್ಕಾರದ ವಿರುದ್ಧ, ಅದರ ಜನವಿರೋಧೀ ಮತ್ತು ಮಹಿಳಾ ವಿರೋಧೀ ನೀತಿಗಳ ವಿರುದ್ಧ-ಬೇನಜೀರ್ ಬುಟ್ಟೋರಂಥವರ ನೇತೃತ್ವದಲ್ಲಿ ತನ್ನ ಧ್ವನಿ ಎತ್ತಿದ್ದಾಳೆ. ಇಸ್ಲಾಂನ ಹೆಸರಿನಲ್ಲಿ ಮಹಿಳೆಗಾಗುತ್ತಿರುವ ಅನ್ಯಾಯದ ವಿರುದ್ಧ ಹೋರಾಡುತ್ತಿದ್ದಾಳೆ.

ಬಾಂಗ್ಲಾ ದೇಶದಲ್ಲಿ ಶೇಖ್ ಹಸೀನಾಳ ನೇತೃತ್ವದಲ್ಲಿರುವ ಒಂಬತ್ತು ವಿರೋಧೀ ಪಕ್ಷಗಳ ಒಕ್ಕೂಟ, ಅಧ್ಯಕ್ಷ ಎರ್ಷಾದ್‌ರ ದಬ್ಬಾಳಿಕೆಯ ವಿರುದ್ಧ ಹೋರಾಡುತ್ತಿದೆ.

ಇರಾನಿನ ಖೊಮೇನಿ, ಅಲ್ಲಿಯ ಜನತೆ ಮತ್ತು ಮಹಿಳೆಯರ ಮೇಲೆ ಇಸ್ಲಾಂನ ಹೆಸರಿನ ಮೇಲೆ ನಡೆಸುತ್ತಿರುವ ಬರ್ಬರ ದಬ್ಬಾಳಿಕೆಯನ್ನು ವಿರೋಧಿಸಿದ್ದಕ್ಕಾಗಿ “ಪೆದಾಯೀನ್” ಮತ್ತು “ಟುಡೇ” ಪಕ್ಷದ ಬಹುತೇಕ ಸದಸ್ಯರು ಜೈಲಿನಲ್ಲಿದ್ದಾರೆ. ಅವರಲ್ಲನೇಕರು ಮಹಿಳೆಯರು ಮತ್ತು ಮಕ್ಕಳು.

ಈ ಮೇಲಿನ ಎಲ್ಲಾ ದೇಶಗಳಲ್ಲಿ ಸರ್ವಾಧಿಕಾರೀ ಧೋರಣೆಯ ವಿರುದ್ಧ ಪ್ರಜಾಸತ್ತಾತ್ಮಕವಾದ ವಾತಾವರಣವನ್ನು ಮೂಡಿಸಲು ಮಹಿಳೆಯರು ನಿರಂತರ ಸಮರವನ್ನೇ ನಡೆಸಿದ್ದಾರೆ ಇವನ್ನೆಲ್ಲ ಹತ್ತಿಕ್ಕಲು ಸಾಮ್ರಾಜ್ಯಶಾಹಿ ಅಮೇರಿಕನ್ ಸರ್ಕಾರವು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ತನ್ನ ಸಂಪೂರ್ಣ ನೆರವನ್ನು ನೀಡುತ್ತಲೇ ಬಂದಿದೆ.

ಭಾರತದಲ್ಲಿ

ಈ ವಿಶ್ವ ಸಮರದ ಭೀತಿ ಭಾರತವನ್ನೇನೂ ತಟ್ಟದೇ ಇಲ್ಲ. ಅಲಿಪ್ತ ನೀತಿಯ ಭಾರತ ಕೂಡಾ ತನ್ನ ನೆರೆ ರಾಷ್ಟ್ರಗಳ ಆಕ್ರಮಣದ ಭಯದಿಂದಾಗಿ, ಶಸ್ತ್ರಾಸ್ತ್ರ ಸಂಗ್ರಹಿಸಬೇಕಾದ ಪರಿಸ್ಥಿತಿ ಅನಿವಾರ್ಯವಾಗುತ್ತಿದೆ. ಇತ್ತೀಚಿಗಿನ ಆಯ-ವ್ಯಯದಲ್ಲಿ ರಕ್ಷಣಾ ವೆಚ್ಚಕ್ಕಾಗಿ 2,500 ಕೋಟಿ ರೂ.ಗಳನ್ನು ಇಟ್ಟಿರುವುದು ಇದಕ್ಕೊಂದು ನಿದರ್ಶನ. ಅನ್ನ, ಬಟ್ಟೆ, ವಸತಿ ಇಲ್ಲದೆ ಕೋಟ್ಯಾಂತರ ಜನರಿರುವ ನಮ್ಮ ದೇಶ ಈ ಖರ್ಚನ್ನು ಹೊರಬಲ್ಲದೇ ? ಯುದ್ಧದ ಎಲ್ಲಾ ಕ್ರೂರ ಪರಿಣಾಮ, ಪೈಶಾಚಿಕ ಅನುಭವವನ್ನು ಭಾರತೀಯ ಮಹಿಳೆಯರು ನೇರವಾಗಿ ಅನುಭವಿಸಬೇಕಾದ ಪರಿಸ್ಥಿತಿ ಬಂದೊದಗದಿದ್ದರೂ ಪ್ರಪಂಚದಾದ್ಯಂತ ಶಾಂತಿಗಾಗಿ ಹೋರಾಡುತ್ತಿರುವ ಮಹಿಳೆಯರನ್ನು ಇವರು ವಂದಿಸಬೇಕಾಗಿದೆ.

ನಮ್ಮ ದೇಶದ ಸನ್ನಿವೇಶದಲ್ಲಿ ಭೂ. ಸಂಬಂಧದ ಪಾಳೇಗಾರೀ ಮೌಲ್ಯಗಳ

[6ನೇ ಪುಟ ನೋಡಿ]

ಅಲ್ಲಲ್ಲಿ ಏನೇನು ?

ಎಸ್.ಎಫ್.ಐ.

ಎಸ್.ಎಫ್.ಐ. ರಾಜ್ಯ ಪದಾಧಿಕಾರಿಗಳ ಸಭೆ 29.3.87ರಂದು ಬೆಳಗ್ಗೆ 10 ಗಂಟೆಗೆ ಚಾಮರಾಜಪೇಟೆಯ ಎಸ್.ಎಫ್.ಐ ಕಛೇರಿಯಲ್ಲಿ. ನಡೆಯಲಿದೆ

ಬೆಂಗಳೂರು

ಭಗತ್ ಸಿಂಗ್ ದಿನಾಚರಣೆ ದಿನಾಂಕ. 23.3.87ರಂದು ಸೋಮವಾರ ಸಂಜೆ 5-30ಕ್ಕೆ ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್ ಆಫೀಸ್‌ನಲ್ಲಿ ‘ಭಗತ್ ಸಿಂಗ್ ಹುತಾತ್ಮ ದಿನಾಚರಣೆ. ಕಾ. ನಾಗಮೋಹನದಾಸ್ ಮುಖ್ಯ ಅಥಿತಿ

ಕುಂದಾಪುರ

ಕೋಣಿ: ಕುಂದಾಪುರ ತಾಲ್ಲೂಕು ಡಿ.ವೈ.ಎಫ್.ಐ. ತಾಲ್ಲೂಕು, ಸಮಾವೇಶ ತಾ-29.3.87ರಂದು ಭಾನುವಾರ ಮಧ್ಯಾಹ್ನ 2.00ರಿಂದ ಜರೆಗಲಿರುವುದು. ಸ್ಥಳ : ಕೋಣಿ ಪಂಚಾಯತ್ ಕಚೇರಿ ವಠಾರ ಧ್ವಜಾರೋಹಣ: ಮಹಾಬಲ ವಡೇರಹೋಬಳಿ ಡಿ.ವೈ.ಎಫ್.ಐ. ರಾಜ್ಯ ಅಧ್ಯಕ್ಷ. ಮುಖ್ಯ ಅತಿಥಿ: ನಾಗೇಶ್ ಕುಮಾರ ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ

ಸೆರೆಮನೆಯಲ್ಲಿ ಸ್ವಾತಂತ್ರ್ಯ ದಿನೋತ್ಸವ

– ಎ. ಕೆ. ಜಿ. ಯವರ
"ನನ್ನ ಜೀವನದ ಕಥೆ"ಯಿಂದ

ಜೀವನಿಲ್ಲದ ಕಲ್ಲು, ಚೈತನ್ಯವಿಲ್ಲದ ಗಿಡ ಮರಗಳೂ ಎಕೇಜಿ, ಎಕೇಜಿ ಎಂದು ಜಪಿಸುತ್ತವೆ. ಇಲ್ಲಿ ಎ. ಕೆ. ಜಿ. ಹಾದು ಹೋಗಿದ್ದರು ಎಂದು ನೆನಪಿಸುತ್ತವೆ.

ಇಂತಹ ಎಕೆಜಿ ಯಾರಿಗಾಗಿ ಅಹರ್ನಿಶಿ ದುಡಿದರೋ ಆ ಕೃಷಿ ಕಾರ್ಮಿಕರ, ರೈತರ, ಕಾರ್ಮಿಕರ ಹೃದಯಗಳು ಇಂದೂ ಕೂಡ ಎಕೆಜಿ ಎಂದ ಕೂಡಲೇ ಅರಳುವುದರಲ್ಲಿ ಏನಾಶ್ಚರ್ಯ.

ಆ ಎಕೆಜಿ ಯವರ ಮರಣದ 10ನೇ ವಾರ್ಷಿಕೋತ್ಸವ ದಿನದಂದು ಅವರ ಹೋರಾಟದ ನೆನಪುಗಳಿವು.

1947ರ ಸ್ವಾತಂತ್ರ್ಯ ದಿನಕ್ಕೆ ಸಂಬಂಧಿಸಿದಂತೆ ಮದ್ರಾಸ್ ಸರ್ಕಾರವು ಎಲ್ಲ ರಾಜಕೀಯ ಕೈದಿಗಳನ್ನೂ ಬಿಡುಗಡೆ ಮಾಡಿತು. ಇ.ಎಂ.ಎಸ್. ಮತ್ತಿತರರು 14ನೇ ತಾರೀಕಿನಂದೇ ಕಲ್ಲಿಕೋಟೆಗೆ ತಲುಪಿದರು. ನನ್ನನ್ನು ಆಗಸ್ಟ್ 15 ರಂದು ಬಿಡುಗಡೆ ಮಾಡಲಾಗುವುದೆಂದು ಸರ್ಕಾರಿ ಪ್ರಕಟಣೆಯಲ್ಲಿ ಪ್ರತ್ಯೇಕವಾಗಿ ನಮೂದಿಸಲಾಗಿತ್ತು. ಆದರೆ ನನ್ನನ್ನು ಮಾತ್ರ ಬಿಡಲಿಲ್ಲ. ಉಳಿದವರೆಲ್ಲರನ್ನೂ ಬಿಡಲಾಯಿತು.

ಎಲ್ಲ ಪಕ್ಷಗಳೂ ಸಂಯುಕ್ತವಾಗಿ ಆಗಸ್ಟ್ 15 ರಂದು ಸ್ವಾತಂತ್ರ್ಯೋತ್ಸವವನ್ನು ಆಚರಿಸಿದವು. ದೇಶಾದ್ಯಂತ ಅಭೂತಪೂರ್ವವಾದ ಉತ್ಸಾಹವೂ, ಆನಂದವೂ ವ್ಯಕ್ತವಾದವು. 1947 ಆಗಸ್ಟ್ 14 ರಂದು ನಾನು ಕಣ್ಣಾನೂರಿನ ದೊಡ್ಡ ಜೈಲಿನಲ್ಲಿ ಏಕಾಂತವಾಸವನ್ನು ಅನುಭವಿಸುತ್ತಿದ್ದೆ. ಇತರ ಸ್ಥಾನಬದ್ಧತಾ ಕೈದಿಗಳೆಲ್ಲರೂ ಬಿಡುಗಡೆಗೊಂಡು ಹೊರಟುಹೋಗಿದ್ದರು. ಆದರೆ ಕಾವುಂಪಾಯಿ ಮತ್ತು ಕರಿವೆಳ್ಳೂರು ಮೊಕದ್ದಮೆಗಳಲ್ಲಿ ವಿಚಾರಣೆ ಮುಗಿದ ಮತ್ತು ವಿಚಾರಣೆಗಾಗಿ ಬಾಕಿ ಇದ್ದ ಹಲವಾರು ಸಂಗಾತಿಗಳು ಅಲ್ಲಿದ್ದರು. ರಾತ್ರಿಯೆಲ್ಲ ನನಗೆ ನಿದ್ದೆ ಬರಲಿಲ್ಲ. ನಾಲ್ದೆಸೆಗಳಿಂದಲೂ ಜಯಕಾರಗಳು ಮೊಳಗುತ್ತಿದ್ದವು. 'ಮಹಾತ್ಮಾ ಗಾಂಧೀಕೀ ಜೈ, ಭಾರತ ಮಾತಾಕೀ ಜೈ' ಮೊದಲಾದ ಘೋಷಣೆಗಳು ಜೈಲಿನ ಗೋಡೆಗಳ ಮೂಲಕ ಪ್ರತಿಧ್ವನಿಸುತ್ತಿದ್ದವು. ನಾಡಿಗೆ ನಾಡೇ ಸೂರ್ಯೋದಯದ ನಂತರದ ವಿಜಯೋತ್ಸವಕ್ಕಾಗಿ ಕಾದಿತ್ತು. ಅನೇಕ ವರ್ಷಗಳಿಂದ ಇದಕ್ಕಾಗಿ ಹೋರಾಡಿ ನಮ್ಮ ಸರ್ವಸ್ವವನ್ನೂ ಕಳಕೊಂಡ ಎಷ್ಟೋ ಜನರು ಈ ದಿನಕ್ಕಾಗಿ ಕಾದಿದ್ದರು. ಸಂತೋಷವೂ ದುಃಖವೂ ಏಕಕಾಲಕ್ಕೆ ನನ್ನನ್ನು ಆವರಿಸಿದವು. ಯಾವ ಉದ್ದೇಶಕ್ಕಾಗಿ ನನ್ನ ಯೌವ್ವನವನ್ನೆಲ್ಲಾ ಸವೆದು ಇಂದು ಕೂಡ ಜೈಲಿನಲ್ಲಿ ಮಲಗಿದ್ದೇನೋ ಆ ಉದ್ದೇಶವು ಈಡೇರಿದ್ದಕ್ಕೆ ನನಗೆ ಸಂತೋಷವಾಯಿತು. ಆದರೆ ನಾನು ಇನ್ನೂ ಕೈದಿಯಾಗಿಯೇ ಇದ್ದೆ. ಭಾರತೀಯರಿಂದ, ಕಾಂಗ್ರೆಸಿಗರಿಂದ ನಾನು ಜೈಲಿನಲ್ಲಿ ಇರುವಂತಾಗಿದೆ; ಬ್ರಿಟಿಷರಿಂದಲ್ಲ. 1927 ರಿಂದೀಚಿನ ಘಟನಾವಳಿಗಳು ನನ್ನ ಕಣ್ಮುಂದೆ ತೇಲಿಹೋದವು ಕೇರಳದ ಕಾಂಗ್ರೆಸ್ ಚಳುವಳಿಯಲ್ಲಿ ನಾನು ವಹಿಸಿದ ಪಾತ್ರವನ್ನು ನೆನೆದು ಹೆಮ್ಮೆಪಟ್ಟೆ. ಕೇರಳ ಪ್ರದೇಶ ಕಾಂಗ್ರೆಸಿನ ಕಾರ್ಯದರ್ಶಿಯೂ ಅಧ್ಯಕ್ಷನೂ, ದೀರ್ಘಕಾಲದ ತನಕ ಎ. ಐ. ಸಿ. ಸಿ. ಸದಸ್ಯನೂ ಆಗಿದ್ದ ವ್ಯಕ್ತಿಯೊಬ್ಬನು ಆಗಸ್ಟ್ 15 ನ್ನು ಆಚರಿಸುತ್ತಿದ್ದುದು ಜೈಲಿನೊಳಗೆ! ಈ ಯೋಚನೆಗಳೊಂದಿಗೆ ನಾನು ಆ ಕೋಣೆಯಲ್ಲಿ ಶತಪಥ ತಿರುಗುತ್ತಿದ್ದೆ.

ಯಾರೊಡನೆ ಮಾತಾಡಲಿ? ನಿದ್ರೆ ಮಾಡದೆ ನನ್ನನ್ನು ಕಾವಲು ಕಾಯುತ್ತಿದ್ದ ವಾರ್ಡನರೇ ಆ ವೇಳೆ ನನಗಿದ್ದ ಒಡನಾಡಿಗಳಾಗಿದ್ದರು. ನಾನು ಅವರೊಂದಿಗೆ ಮಾತನಾಡಿದೆ. ಆಗಸ್ಟ್ 15ರ ಮಹತ್ವವನ್ನು ವಿವರಿಸಿದೆ. ನಮ್ಮ ಸ್ವಂತ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ; ತಮಗೆ ಇನ್ನು ಮುಂದೆ ಹೆಚ್ಚು ಸಂಬಳ ಸಿಗಬಹುದೆಂದು ಅವರು ನಂಬಿದ್ದರು. ಪಾಪ; ಅವರು ತಪ್ಪು ದಾರಿಗೆಳೆಯಲ್ಪಟ್ಟಿದ್ದರು.

ನಾನು ಜೈಲಿನಲ್ಲೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಬಯಸಿದೆ. ಅದಕ್ಕಾಗಿ ಮೊದಲೇ ಜೋಪಾನವಾಗಿಟ್ಟಿದ್ದ ರಾಷ್ಟ್ರಧ್ವಜವನ್ನು ಎತ್ತಿಹಿಡಿದು ಆಗಸ್ಟ್ 15ರ ಮುಂಜಾನೆ ನಾನು ಜೈಲಿನ ಕೋಣೆಯಿಂದ ಹೊರಬಂದೆ. ಕೆಲವು ಕೈದಿಗಳು ನನ್ನನ್ನು ಹಿಂಬಾಲಿಸಿದರು. ಮೂರನೇ ಬ್ಲಾಕಿನ ಕೈದಿಗಳೆಲ್ಲ ಹೊರಬಂದರು. ಅಲ್ಲಿ ನಾನು ಧ್ವಜಾರೋಹಣ ಮಾಡಿದೆ. ನಾಲ್ಕೈದು ನಿಮಿಷ ಭಾಷಣವನ್ನೂ ಮಾಡಿದೆ. ಜೈಲು ಅಧಿಕಾರಿಗಳಿಗೆ ಇದು ಇಷ್ಟವಾಗಲಿಲ್ಲ. ಆದರೆ ಆ ದಿನಸ ಲಾಠೀ ಚಾರ್ಜು ಮಾಡಲು ಅವರಿಗೆ ಮನಸ್ಸಾಗಲಿಲ್ಲ. ಬ್ರಿಟಿಷ್ ಚಕ್ರವರ್ತಿಗಿದಿರಾಗಿ ಜನತೆಯನ್ನು ಎತ್ತಿಕಟ್ಟಿದ್ದೇನೆಂಬ ಆರೋಪದ ಮೇಲೆ ಆಗಸ್ಟ್ 15ರ ನಂತರ ನನ್ನನ್ನು ಕಲ್ಲಿಕೋಟೆಯ ಅಡಿಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಲಾಯಿತು. ಹೆಮ್ಮೆಪಡುತ್ತೇನೆ. ಈ ದೇಶದ ಎಲ್ಲಾ ಸ್ವಾತಂತ್ರ್ಯಪ್ರೇಮಿಗಳೂ, ಸ್ವಾತಂತ್ರ್ಯ ಹೋರಾಟವು ಆರಂಭವಾದಂದಿನಿಂದಲೂ ಅದರ ಮುಖಂಡರಾಗಿರುವ ನೆಹರು, ಮಹಾತ್ಮಾಗಾಂಧಿ ಮೊದಲಾದವರು, ಚಕ್ರವರ್ತಿಯ ಸರ್ಕಾರಕ್ಕಿದಿರಾಗಿ ವೈಷಮ್ಯವನ್ನು ಬೆಳೆಸಲು ಶ್ರಮವಹಿಸಿದ್ದಾರೆ. ಇದೇ ಕಾರಣಕ್ಕಾಗಿ ಹಿಂದೆ ಮಹಾತ್ಮಾ ಗಾಂಧಿಯ ವಿರುದ್ಧವೂ ಭಾರತೀಯ ದಂಡಸಂಹಿತೆಯ 124 [ಎ] ನಿಬಂಧನೆಯ ಪ್ರಕಾರ

ಸ್ವಾತಂತ್ರ್ಯಕ್ಕಾಗಿ ಎಡಬಿಡದೆ ದುಡಿದ ಎಕೆಜಿಯವರು ದೇಶದ ಸ್ವಾತಂತ್ರ್ಯ ದಿನಾಚರಣೆಯನ್ನು ಸೆರೆಮನೆಯಲ್ಲಿಯೇ ಮಾಡಬೇಕಾಯಿತು. ಸ್ವಾತಂತ್ರ್ಯ ದಿನಾಚರಣೆಯನ್ನು ಮಾಡಿದುದಕ್ಕಾಗಿ ಸ್ವತಂತ್ರ ಭಾರತದಲ್ಲಿ ಶಿಕ್ಷೆಗೆ ಗುರಿಯಾದವರೂ ಇವರೇ.

ಆಗಸ್ಟ್ 15ರಂದು ದೇಶವು ಸ್ವತಂತ್ರವಾಗಿತ್ತು. ಇದಾದನಂತರ, ಬ್ರಿಟಿಷರಿಂದ ರೂಪಿಸಲಾದ ಕ್ರಿಮಿನಲ್ ಕಾನೂನಿನ 124 [ಎ] ಎಂಬ ವಿಧಿಗನುಸಾರವಾಗಿ, ರಾಜದ್ರೋಹದ ಆರೋಪದ ಮೇಲೆ ನನ್ನನ್ನು ಮ್ಯಾಜಿಸ್ಟ್ರೇಟರ ಬಳಿಗೆ ಕೊಂಡುಹೋಗುತ್ತಿದ್ದರು! ಜನತೆಗೆ ವಿಸ್ಮಯವಾಯಿತು. ಇದು ಯಾವ ರೀತಿಯ ಸರ್ಕಾರ?

ನ್ಯಾಯಾಲಯದಲ್ಲಿ ನಾನು ಈ ಕೆಳಗಿನ ಹೇಳಿಕೆ ನೀಡಿದೆ: "ಬ್ರಿಟಿಷ್ ಇಂಡಿಯಾದ ಚಕ್ರವರ್ತಿಗೆ ಇದಿರಾಗಿ ದ್ವೇಷವನ್ನು ಬೆಳೆಸಿದ್ದೇನೆನ್ನಲು ನಾನು ವಿಚಾರಣೆ ನಡೆದಿದೆ. ಇವೆಲ್ಲದರ ಫಲವಾಗಿ, ಚಕ್ರವರ್ತಿಯ ಸರ್ಕಾರವೂ ಬ್ರಿಟಿಷ್ ಇಂಡಿಯವೂ ಇಂದು ಕೊನೆಗೊಂಡಿವೆ. ನನ್ನೊಂದಿಗೆ ಇವೇ ಅಪರಾಧಗಳಲ್ಲಿ ಭಾಗಗಳಾಗಿದ್ದ ಒಡನಾಡಿಗಳಲ್ಲಿ ಹಲವರು ಇಂದು ಮಂತ್ರಿಗಳೂ ರಾಜ್ಯಪಾಲರೂ ಆಗಿರುತ್ತಾರೆ. ಆಗಸ್ಟ್ 15ರಂದು ಸ್ವಾತಂತ್ರ್ಯಗಳಿಸಿದ್ದೇನೆಂದು ಪರಿಗಣಿತವಾಗಿರುವ ಈ ಸಂದರ್ಭದಲ್ಲಿ ನನ್ನನ್ನು ಇಲ್ಲಿಗೆ ವಿಚಾರಣೆಗೆ ತಂದಿರುವುದು ವಿಚಿತ್ರ. ನನಗಿದರಿಂದ ಖೇದವಾಗಿದೆ." ತಮಾಷೆಯೆಂದರೆ ಕಾಂಗ್ರೆಸಿಗನಾದ ಕೆ. ಪಿ. ರಾಮುಣ್ಣಿ ಮೆನನ್ ಸರಕಾರಿ ವಕೀಲರಾಗಿದ್ದರು!

ತುರ್ತುಪರಿಸ್ಥಿತಿ ಹೇರಿಕೆ ವಿರುದ್ಧ

ಒಂದು ವಿಶಿಷ್ಟವಾದ ಮತ್ತು ಯಾತನಾಮಯವಾದ ಪರಿಸ್ಥಿತಿಯಲ್ಲಿ ನಾನು ಮಾತನಾಡಲು ಎದ್ದು ನಿಂತಿದ್ದೇನೆ. ಪಾರ್ಲಿಮೆಂಟಿನ 34 ಮಂದಿ ಸದಸ್ಯರು ಇಲ್ಲಿಲ್ಲ. ಅವರು ತಮ್ಮ ಇಷ್ಟದಂತೆ ಇಲ್ಲಿಗೆ ಬಾರದೆ ಇರುವುದಲ್ಲ; ವಿಚಾರಣೆಯಿಲ್ಲದೆ ಅವರನ್ನು ಬಂಧನದಲ್ಲಿಡಲಾಗಿದೆ. ಶ್ರೀಮತಿ ಇಂದಿರಾಗಾಂಧಿ ಮತ್ತು ಆಕೆಯ ಸರಕಾರವು ಪಾರ್ಲಿಮೆಂಟನ್ನೇ ಒಂದು ವಿಡಂಬನೆಯನ್ನಾಗಿಯೂ ತಿರಸ್ಕಾರದ ವಸ್ತುವನ್ನಾಗಿಯೂ ಪರಿವರ್ತಿಸಿವೆ. ನನ್ನನ್ನು ಬಂಧಿಸಿ ಒಂದು ವಾರ ಜೈಲಿನಲ್ಲಿರಿಸಲಾಗಿತ್ತು. ನಿಮಗೆಲ್ಲರಿಗೂ ಚೆನ್ನಾಗಿ ಗೊತ್ತಿರುವ ಜ್ಯೋತಿರ್ಮಯ ಬಸು ಮತ್ತು ನಮ್ಮ ಪಕ್ಷದ ಇನ್ನೊಬ್ಬರು ಸದಸ್ಯರಾದ ನೂರುಲ್ ಹುದಾ ಜೈಲಿನಲ್ಲಿದ್ದಾರೆ. ಮುದುಕನಾದ ನಾನು ಈಗ ಗಟ್ಟಿಯಾಗಿ ಮಾತನಾಡಲಾರೆ. ನನ್ನನ್ನು ಬಿಡುಗಡೆ ಮಾಡಿ ಅವರಿಬ್ಬರನ್ನು ಜೈಲಿನಲ್ಲಿ ಇಟ್ಟಿದ್ದಾರೆ. ಇದರ ಕಾರಣಗಳು ಸ್ಪಷ್ಟವಾಗಿವೆ. ನಾನು ಜೈಲುಗಳಿಗೆ ಹೆದರುವವನಲ್ಲ. ಕಳೆದ 45 ವರ್ಷಗಳ ಅವಧಿಯಲ್ಲಿ 17 ವರ್ಷಗಳ ಕಾಲ ನಾನು ಜೈಲಿನಲ್ಲಿದ್ದೆ. ಆದರೆ ಎರಡು ದಿನ ಜೈಲಿನೊಳಗೆ ನನ್ನನ್ನು ಅಮಾನುಷವಾಗಿ ನೋಡಿಕೊಂಡ ವಿಷಯದಲ್ಲಿ ನನಗೆ ನಿಜವಾಗಿಯೂ ತುಂಬಾ ವ್ಯಸನವಾಗುತ್ತದೆ. ನಾನು ಉಪವಾಸ ಮುಷ್ಕರ ಮಾಡಿದೆ. ಲೋಕಸಭಾಧ್ಯಕ್ಷರಿಗೆ ತಂತಿ ಸಂದೇಶ ಕಳುಹಿಸಿದೆ. ಆಮೇಲೆ ಪರಿಸ್ಥಿತಿ ಸುಧಾರಿಸಿತು.

ಸ್ವಾಮಿ, ಒಂದು ಕಾಲದಲ್ಲಿ ಕಾಂಗ್ರೆಸಿಗನಾಗಿದ್ದು ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ, ಕಮ್ಯುನಿಸ್ಟ್ ಪಾರ್ಟಿಯಲ್ಲೂ ಒಬ್ಬ ರಾಜಕೀಯ ಮುಖಂಡನಾಗಿರುವನನಗೆ

ತುರ್ತುಪರಿಸ್ಥಿತಿಯನ್ನು ಹೇರುವ ಆಜ್ಞೆಯನ್ನು ವಿರೋಧಿಸಿ ಎಕೆಜಿಯವರು ಲೋಕಸಭೆಯಲ್ಲಿ ಮಾಡಿದ ಅಪೂರ್ವ ಭಾಷಣದ ತುಣುಕುಗಳು.

ಬಂಧನಗಳನ್ನೂ ಅನೇಕ ಕಷ್ಟಗಳನ್ನೂ ಅನುಭವಿಸಿದವನಾದ ನನ್ನನ್ನು ಈ ರೀತಿಯಲ್ಲಿ ನೋಡಿಕೊಳ್ಳಲಾಯಿತೆಂದು ಹೇಳಲು ನನಗೆ ವ್ಯಸನವಾಗುತ್ತಿದೆ. ಎರಡು ದಿನಗಳ ಹಿಂದೆಯಷ್ಟೇ ನನ್ನ ಬಿಡುಗಡೆಯಾಯಿತು. ಇದರ ಕಾರಣ ನನಗೆ ಗೊತ್ತು. ಇವತ್ತು ಜೈಲಿನಲ್ಲಿರುವ ನನ್ನ ಎರಡು ಸಾವಿರವೋ ಮೂರು ಸಾವಿರವೋ ಸಂಗಾತಿಗಳನ್ನು ಏನು ಮಾಡುತ್ತಾರೆ? ನನ್ನನ್ನೂ ಶ್ರೀ ನಂಬೂದಿರಿಪಾಡರನ್ನೂ ಮಾತ್ರವೇ ಯಾಕೆ ಬಿಡುಗಡೆ ಮಾಡಿದರು? ಯಾವುದೇ ಮಾರ್ಕ್ಸ್‌ವಾದಿ ಇಲ್ಲವೆ ಎಡ ವಿರೋಧಿ ಪಕ್ಷಗಳ ಸದಸ್ಯರನ್ನು ಬಂಧಿಸಿಲ್ಲವೆಂದೂ ಪ್ರತಿಗಾಮಿಗಳನ್ನು ಮಾತ್ರವೇ ಬಂಧಿಸಿದ್ದೆಂದೂ ಪ್ರಪಂಚಕ್ಕೆ ತೋರಿಸುವುದೇ ಇದರ ಉದ್ದೇಶ. ಇದರ ವಿವರಗಳಿಗೆಲ್ಲ ನಾನು ಹೋಗಬಯಸುವುದಿಲ್ಲ. ಮೊದಲು ಕಾಂಗ್ರೆಸಿನಲ್ಲೂ ಆಮೇಲೆ ಕಮ್ಯುನಿಸ್ಟ್ ಪಾರ್ಟಿಯಲ್ಲೂ ಒಬ್ಬ ರಾಜಕೀಯ ಮುಖಂಡನಾಗಿರುವನನಗೆ ನನ್ನದೇ ಅಭಿಪ್ರಾಯಗಳಿರುವುದರಿಂದ ನಾನು ಇದನ್ನು ಹೇಳುತ್ತಿದ್ದೇನೆ ಆದುದರಿಂದಲೇ ನನ್ನನ್ನು ನೋಡಿಕೊಂಡ ವಿಧಾನದ ಕುರಿತು ನಾನು ನನ್ನ ಭಾವನೆಗಳನ್ನು ವ್ಯಕ್ತಪಡಿಸಿದೆ. ನನ್ನನ್ನು ಬಂಧಿಸಿದಾಗ ನನ್ನ ಸಂಗಾತಿಗಳು ತಡೆಯದಿರುತ್ತಿದ್ದರೆ ಪೋಲೀಸರು ನನ್ನ ತಲೆಯನ್ನು ಒಡೆದುಹಾಕುತ್ತಿದ್ದರು. ನನ್ನ ಸಂಗಾತಿಗಳು ಆಗ ನನಗೆ ರಕ್ಷಣೆ ನೀಡಿದುದರಿಂದ ನನಗೆ ಗಾಯಗಳು ಮಾತ್ರ ಆದವು. ನನ್ನ ಸಂಗಾತಿಗಳು ನನಗೆ ರಕ್ಷಣೆ ನೀಡಬಾರದಿತ್ತೆಂದೂ ನಾನು ಸಾಯಬೇಕಿತ್ತೆಂದೂ ಬಯಸಿದ್ದೆ. ಕಾರ್ಮಿಕ ವರ್ಗದ ಹಿತರಕ್ಷಣೆಗಾಗಿಯೂ ಈ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕಾಗಿಯೂ ಹೋರಾಡುತ್ತ ನಾನು ಸತ್ತರೆ ನನಗೆ ಕೀರ್ತಿ ಬರಬಹುದು. ದುರದೃಷ್ಟವಶಾತ್ ನಾನು ಸಾಯದೆ, ಈಗ ಇಲ್ಲಿ ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ನಿಂತಿದ್ದೇನೆ. ○

ಬೆಳ್ಳಿಹಬ್ಬದಲ್ಲೂ ಸೆರೆಮನೆಯಲ್ಲಿ

ಕೋರ್ಟುಗಳಲ್ಲಿ ತಮ್ಮ ರಕ್ಷಣೆಗಾಗಿ ವಾದಿಸದಂತೆ ನಮ್ಮ ಸ್ವಯಂ ಸೇವಕರಿಗೆ ಆದೇಶಿಸಲಾಗಿತ್ತು. 80 ದಿನಗಳ ಹೋರಾಟದ ವೇಳೆಯಲ್ಲಿ ಬಂಧಿಸಲ್ಪಟ್ಟ 1,60,000 ಸ್ವಯಂ ಸೇವಕರ ಪೈಕಿ, 10,000 ಕ್ಕಿಂತಲೂ ಹೆಚ್ಚು ಜನರಿಗೆ ಶಿಕ್ಷೆಯಾಯಿತು. ಕೋರ್ಟಿನ ಮುಂದೆ ವಾದಿಸಲು ಹೋರಾಟ ಸಮಿತಿ ನನಗೆ ಒಬ್ಬನಿಗೆ ಮಾತ್ರ ಅನುಮತಿ ಕೊಟ್ಟಿತು. ನನ್ನ ಪರವಾಗಿ ನಾನೇ ಸ್ವತಃ ವಾದಿಸಿದೆ. ನನ್ನ ಮೇಲೆ ಎರಡು ಆರೋಪಗಳಿದ್ದವು. ಕೋರ್ಟು ನಿಂದೆ ಮತ್ತು ಇತರರ ಭೂಮಿಯಲ್ಲಿ ಅಕ್ರಮ ಪ್ರವೇಶ. ನಾನು ಕೋರ್ಟು ನಿಂದೆ ಮಾಡಿಲ್ಲವೆಂದು ನನ್ನನ್ನು ಬಲವಂತವಾಗಿ ಪೋಲೀಸರು ಕೋರ್ಟಿಗೆ ತಂದುದಾಗಿಯೂ ನಾನು ವಾದಿಸಿದೆ. ಎರಡನೇ ಆರೋಪದಲ್ಲಿ ಕಾನೂನು ಅಕ್ರಮವಾಗಿ ವಶದಲ್ಲಿಟ್ಟಿದ್ದ, ಭೂಮಿಯನ್ನು ಸರ್ಕಾರದ ಗಮನಕ್ಕೆ ತಂದದ್ದು ಮಾತ್ರವೇ ನಾನು ಮಾಡಿದ ಕೆಲಸವೆಂದೂ ನಾನು ವಾದಿಸಿ, ಇದಕ್ಕೆ ಸಾಕ್ಷಿಯಾಗಿ ಮುಖ್ಯಮಂತ್ರಿ, ಕಂದಾಯ ಮಂತ್ರಿ ಮತ್ತು ಸರ್ಕಾರಿ ಅಧಿಕಾರಿಗಳನ್ನು ಕಟಕಟೆಗೆ ತರಬೇಕೆಂದು ಕೇಳಿದೆ. ಕಾನೂನು ಉಲ್ಲಂಘನೆಯನ್ನು ಸರ್ಕಾರದ ಗಮನಕ್ಕೆ ತಂದ ಸ್ವಯಂ ಸೇವಕರಿಗೆ ಶಿಕ್ಷೆ ನೀಡಲು ಸಾಧ್ಯವಿಲ್ಲವೆಂದೂ, ಶಿಕ್ಷೆ ನೀಡಬೇಕಾಗಿರುವುದು ಭೂಮಾಲಿಕರಿಗೆಂದೂ ನಾನು ವಾದಿಸಿದೆ. ಕೋರ್ಟು ಸಾಕ್ಷಿಗಳನ್ನು ಕರೆಯಲಿಲ್ಲ. ಆದರೆ ಮ್ಯಾಜಿಸ್ಟ್ರೇಟರು ನನ್ನನ್ನು ಎರಡು ಆರೋಪಗಳಿಂದಲೂ ಮುಕ್ತಗೊಳಿಸಿದರು. ಅಷ್ಟರೊಳಗೆ ನಾನು ತಿರುವನಂತಪುರದ ಸೆಂಟ್ರಲ್ ಜೈಲಿನಲ್ಲಿ 23 ದಿನಗಳನ್ನು ಕಳೆದಿದ್ದೆ. 1947ರಲ್ಲಿ ಸ್ವಾತಂತ್ರ್ಯವನ್ನು ಘೋಷಿಸಿದಾಗಲೂ 1972 ರಲ್ಲಿ ಸ್ವಾತಂತ್ರ್ಯದ 25ನೇ ವಾರ್ಷಿಕೋತ್ಸವದ ವೇಳೆಯಲ್ಲೂ ನನ್ನನ್ನು ಜೈಲಿನಲ್ಲಿ ಬಂಧಿಸಿ ಇಟ್ಟದ್ದು ಸ್ವಾತಂತ್ರ್ಯದ ಒಂದು ವಿಡಂಬನೆ. ಸ್ವಾತಂತ್ರ್ಯ, ಪ್ರಗತಿ ಮತ್ತು ಸಮಾಜವಾದಕ್ಕಾಗಿ ನಡೆಸುವ ಹೋರಾಟವು ಇನ್ನೂ ಭಾರತದ ಜನತೆಯ ಪ್ರಧಾನ ಅವಶ್ಯಕತೆಯಾಗಿದೆಯೆಂಬುದನ್ನು, ಇದು ಸೂಚಿಸುತ್ತದೆ. ○

ಎ. ಕೆ. ಜಿ. ಯವರ ಬಗ್ಗೆ ಬಿ. ಟಿ. ಆರ್. ಮತ್ತು ಇ. ಕೆ. ನಾಯನಾರ್

ತನ್ನ ಸಂಪೂರ್ಣ ಜೀವನವನ್ನು ಜನತೆಯೊಂದಿಗೆ ಗುರುತಿಸಿಕೊಂಡು ಅವರ ಎಲ್ಲಾ ಸಂಕಷ್ಟಗಳನ್ನು, ಯಾತನೆಗಳನ್ನು, ನೋವನ್ನು ವೈಯುಕ್ತಿಕವಾಗಿ ಬದುಕಿನಲ್ಲಿ ಅನುಭವಿಸಿದ ಇನ್ನೊಬ್ಬ ವ್ಯಕ್ತಿಯನ್ನು ಭಾರತದಲ್ಲಿ ಕಾಣಲು ಸಾಧ್ಯವಿರಲಿಕ್ಕಿಲ್ಲ. ಆದ್ದರಿಂದ ಎ. ಕೆ. ಜಿ. ಯವರ ಜೀವನೇತಿಹಾಸವನ್ನು ವೈಕೋಂ ಸತ್ಯಾಗ್ರಹದಿಂದ ಆರಂಭಿಸಿ ಅಂತಿಮಗಳಿಗೆಯ ವರೆಗಿನ ಸುಮಾರು ಅರ್ಧ ಶತಮಾನದ ನಮ್ಮ ಕಾಲದ ಹೋರಾಟಗಳಿಂದ ಪ್ರತ್ಯೇಕಿಸುವುದು ಸಾಧ್ಯವಿಲ್ಲ. ಅವರ ಪ್ರತಿಯೊಂದು ಕೆಲಸ, ದುಡಿಮೆ ಜನಗಳ ಹೋರಾಟಕ್ಕೆ ನಿಕಟವಾಗಿ ಸಂಬಂಧಪಟ್ಟದ್ದಾಗಿತ್ತು, ಅವರ ನೇತೃತ್ವದ ಮಹಾನ್ ಹೋರಾಟದ ಅಂಗವಾಗಿತ್ತು. ಅವರ ತನು, ಮನ ಸದಾ ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಧ್ಯೇಯ ಸಾಧನೆಗೆ, ಅವರೇ ಸ್ವತಃ ನೇತೃತ್ವವಹಿಸಿದ್ದ ರೈತ ಆಂದೋಲನದ ಧ್ಯೇಯ ಸಾಧನೆಗೆ ಮುಡಿಪಾಗಿತ್ತು.

ಮಾತಿನಲ್ಲೂ, ಕೃತಿಯಲ್ಲೂ ಜನಗಳ ಶೋಷಕರನ್ನು, ವರ್ಗ ಶತ್ರುವನ್ನು ಎದುರಿಸುವಲ್ಲಿ ಗೋಪಾಲನ್‌ರವರ ಅಪ್ರತಿಮ ಧೈರ್ಯದಿಂದಾಗಲಿ ಅವರು ಜನತೆಯ ಮನಸ್ಸಿನಲ್ಲಿ ಇತರರು ಯಾರೂ ಪಡೆಯದಿದ್ದ ಉನ್ನತ ಸ್ಥಾನ ಪಡೆದಿದ್ದಾರೆ.

ಧ್ಯೇಯ ಸಾಧನೆಗಾಗಿ ಅವರ ಸಮರ್ಪಣೆ ಹಾಗೂ ಧೈರ್ಯವಂತ ಮಾರ್ಕ್ಸ್‌ವಾದೀ–ಲೆನಿನ್‌ವಾದೀ ಸಿದ್ಧಾಂತ ಇನ್ನಷ್ಟು ಸ್ಫೂರ್ತಿಪಡೆದು ಮತ್ತಷ್ಟು ಗಾಢವಾಯಿತು. ಒಬ್ಬ ಕ್ರಾಂತಿಕಾರಿಯ ವೈಜ್ಞಾನಿಕ ದೃಷ್ಟಿಕೋನವಿಲ್ಲದೆ, ಅದರ ಮಾರ್ಗದರ್ಶನವಿಲ್ಲದೆ ಕೇವಲ ಪ್ರಾಮಾಣಿಕತೆ, ಸಮರ್ಪಣೆ ಹಾಗೂ ಸದ್ಭಾವನೆಗಳಿಂದ ಬಹಳವೇನೂ ಸಾಧಿಸಲು ಸಾಧ್ಯವಾಗುವುದಿಲ್ಲ. ಸರಿಯಾದ ಕ್ರಾಂತಿಕಾರೀ ಮಾರ್ಗದರ್ಶನವಿಲ್ಲದ ಆತ್ಮ ಪರಿತ್ಯಾಗ ಹಾಗೂ ಶೌರ್ಯ ದುರಂತದತ್ತ ಸಾಗುತ್ತದೆ, ನಗೆಗೀಡಾಗುವ ಪ್ರಹಸನವಾಗಿ ಬಿಡುತ್ತದೆ. ತ್ಯಾಗದಿಂದ ತುಂಬಿದ ಗೋಪಾಲನ್‌ರ ಜೀವನ ಕ್ರಾಂತಿಕಾರೀ ದೃಷ್ಟಿಕೋನ ಹಾಗೂ ಸಿದ್ಧಾಂತವನ್ನು ಅಂಗೀಕರಿಸಿದುದರಿಂದಾಗಿ ಪರಿಪೂರ್ಣವಾಯಿತು. ಯಾಕೆಂದರೆ ಧೈರ್ಯ ಹಾಗೂ ಆತ್ಮ ಪರಿತ್ಯಾಗ ಈಗ ಕ್ರಾಂತಿಕಾರೀ ಮುನ್ನಡೆಯ ಸೇವೆಗೆ ಸಂದಿತು.

ತನ್ನ ಆರಂಭದ ವರ್ಷಗಳಲ್ಲಿ ಶಿಕ್ಷಣ ಹಾಗೂ ತರಬೇತಿಯಿಂದ ವಂಚಿತರಾದ ಗೋಪಾಲನ್ ಯಾರಿಂದಲೂ ತರಬೇತಿ ಪಡೆಯದೆ ವರ್ಗ ಹೋರಾಟದ ಶಾಲೆಯಲ್ಲಿ ತರಬೇತಿ ಪಡೆದರು. ಅದರಿಂದ ಅವರು ಪಾಠ ಕಲಿತರು ಹಾಗೇ ಕಲಿತ ಪಾಠವನ್ನು ಎಂದೂ ಮರೆಯಲಿಲ್ಲ. ಈ ರೀತಿ ತಾನು ಮುಟ್ಟಿದ ಪ್ರತಿಯೊಂದು ರಂಗದಲ್ಲಿಯೂ ಅವರು ತನ್ನ ಅಚ್ಚಳಿಯದ ಗುರುತು ಬಿಟ್ಟುಹೋಗಿದ್ದಾರೆ. ಎಂದೂ ಸೋಲರಿಯದ ರೈತ ಮುಖಂಡನಾಗಿ, ಸಂಸತ್ತಿನಲ್ಲಿ ಸರ್ವಮಾನ್ಯ ಮುಖಂಡರಾಗಿ, ಪಕ್ಷದ ನುರಿತ ನಿಧಿ ಸಂಗ್ರಹಕರಾಗಿ, ಜನ ಸಮೂಹದ ನಡುವೆ ಸಿ.ಪಿ.ಐ.[ಎಂ] ಅತ್ಯಂತ ಜನಪ್ರಿಯ ಮುಖಂಡರಾಗಿ ಗೋಪಾಲನ್ ಪಕ್ಷದ ಹಾಗೂ ಕಮ್ಯುನಿಸ್ಟ್ ಆಂದೋಲನದ ಬೆಳವಣಿಗೆಗೆ ಬಹುವಿಧ ಕಾಣಿಕೆ ನೀಡಿದರು. ದಶಕಗಳ ಕಾಲ ಅಷ್ಟೊಂದನ್ನು ಅಗಾಧ ಪ್ರಮಾಣದಲ್ಲಿ, ಅಷ್ಟೊಂದು ಅವ್ಯಾಹತವಾಗಿ ದುಡಿಯುವುದು ಕೆಲವರಿಂದ ಮಾತ್ರ ಸಾಧ್ಯ.

ಎ. ಕೆ. ಜಿ.ಯವರಿಗೆ ತನ್ನ ಜೀವನ ಕಾಲದಲ್ಲಿ ತಾನೆತ್ತಿಕೊಂಡ ಎರಡು ಕಾರ್ಯಗಳನ್ನು ಪೂರೈಸುವುದು ಸಾಧ್ಯವಾಯಿತು. ಒಂದು, ಬ್ರಿಟಿಶರು ಭಾರತವನ್ನು ಬಿಡುವಂತೆ ಮಾಡಿ ಭಾರತದ ಸ್ವಾತಂತ್ರ್ಯವನ್ನು ಗಳಿಸುವುದು. ಮತ್ತು ಎರಡನೆಯದು, ಸ್ವಾತಂತ್ರ್ಯ ಆಂದೋಲನ ವಿಧಿಸಿದ ಕರ್ತವ್ಯಗಳನ್ನು ಸಂಪೂರ್ಣವಾಗಿ ಕಡೆಗಣಿಸಿ ಈ ದೇಶದಲ್ಲಿ ಬಂಡವಾಳಶಾಹಿಯನ್ನು ಹಾಗೂ ಹೊಸದೊಂದು ರೂಪದಲ್ಲಿ ಭೂಮಾಲಕತ್ವವನ್ನು ಕಟ್ಟಲಾರಂಭಿಸಿದ ಕಾಂಗ್ರೆಸ್ಸಿನ ಆಳ್ವಿಕೆ ಕೊನೆಗೊಳಿಸಿದ್ದು. ಈ ಎರಡೂ ಹೋರಾಟಗಳಲ್ಲಿ ಎ.ಕೆ.ಜಿ. ಜೈಲಿನ ಒಳಗಿನಿಂದ ಮತ್ತು ಹೊರಗಿನಿಂದ, ಬಹಿರಂಗವಾಗಿ ಮತ್ತು ತಲೆಮರೆಸಿಕೊಂಡೂ, ಸಂಪತ್ತಿನ ಒಳಗೆ ಮತ್ತು ಹೊರಗೆ ಪ್ರಮುಖ ಪಾತ್ರ ವಹಿಸಿದರು. ಅವರ ಕೆಲವು ಸಮರಗಳಂತೂ ಕೇರಳದಲ್ಲಿ ಮಾತ್ರವಲ್ಲ ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ಗುಜರಾತ್ ಮತ್ತು ಪಂಜಾಬಿನಲ್ಲಿ ಕೂಡಾ ಯುಗಾಂತರಕಾರಿ. ಅವರ ಹೋರಾಟದ ಸತ್ವ ಅಂತಿಮ ಗಳಿಗೆಯವರೆಗೂ ನಿರಂತರವಾಗಿತ್ತು. ತುರ್ತು ಪರಿಸ್ಥಿತಿಯ ದಿನಗಳಲ್ಲಿ ಅವರ ಸಂಟರಗಾಳಿ ತೆರದ ಸುತ್ತಾಟ ಹಾಗೂ ಆಡಳಿತದ ವಿರುದ್ಧ ಬಹಿರಂಗ ಸಂಘರ್ಷ 1977 ರಲ್ಲಿ ಇಂದಿರಾಗಾಂಧಿ ಹಾಗೂ ಕಾಂಗ್ರೆಸ್ ಆಳ್ವಿಕೆಯ ಪತನಕ್ಕೆ ದಾರಿ ಮಾಡಿಕೊಟ್ಟ ಸರ್ವಾಧಿಕಾರೀ–ವಿರೋಧಿ ಹೋರಾಟದಲ್ಲಿ ಜನರಿಗೆ ಸ್ಫೂರ್ತಿ ತುಂಬಿದವು.

ಎ. ಕೆ. ಜಿ. ಒಂದು ಕಾರ್ಯವನ್ನು ಪೂರ್ಣಗೊಳಿಸಲಾಗದೆ ಅಗಲಿದರು. ಅದೆಂದರೆ ಜನತಾ ಪ್ರಜಾಪ್ರಭುತ್ವ ಕ್ರಾಂತಿಯನ್ನು ಪೂರ್ಣಗೊಳಿಸುವುದು. ಈ ಕಾರ್ಯವನ್ನು ಸಾಧಿಸುವುದು ಈಗ ಕ್ರಾಂತಿಕಾರೀ ಆಂದೋಲನದ ಕರ್ತವ್ಯ.

ಸೆರೆಮನೆಯಲ್ಲಿ ಎ. ಕೆ. ಜಿ.

ಜೈಲಿನ ಅನುಭವ ಸಮೃದ್ಧವಾಗಿದ್ದ ವ್ಯಕ್ತಿ ಎ. ಕೆ. ಜಿ. 15 ಬಾರಿ ಜೈಲುವಾಸ ಅನುಭವಿಸಿದ ಅವರು ಜೈಲು ಜೀವನವನ್ನು ಕೂಡಾ ಚೆನ್ನಾಗಿ ಸಂಘಟಿಸುತ್ತಿದ್ದರು. ಅವರು ಅ ಕಮ್ಯೂನ್‌ನ ಮೇಯರ್ ಆಗುತ್ತಿದ್ದರು. ಜೈಲು ಅಧಿಕಾರಿಗಳಿಗೆ ಭಯಂಕರ ದುಸ್ವಪ್ನವಾಗಿದ್ದರೂ, ಜೈಲು ವಾರ್ಡನ್‌ಗಳು ಹಾಗೂ ಸಹ-ಆರೋಪಿಗಳ ಪ್ರೀತಿಗೆ ಅವರು ಪಾತ್ರರಾಗುತ್ತಿದ್ದರು. ಸುತ್ತಲಿದ್ದವರೆಲ್ಲರೂ ಸಂತೋಷ, ಭರವಸೆ ಹರಡುತ್ತಿದ್ದರು. ಇತರರೊಡನೆ ಓದುತ್ತಿದ್ದರು, ಆಡುತ್ತಿದ್ದರು. ತಮ್ಮ ಶ್ರೀಮಂತ ಅನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳುತ್ತಿದ್ದರು. ತನ್ನ ಜೈಲು ದಿನಚರಿಯಲ್ಲಿ ಪುಟ ಪುಟಗಳಲ್ಲಿ ಎ.ಕೆ.ಜಿ. ಎದ್ದು ಕಾಣುತ್ತಾರೆ. ಅವರ ಒಬ್ಬ ಸಹ–ಅಪಾದಿತ ಹೋರಾಟಗಾರ ಬರೆದಿದ್ದಾರೆ.

ಭೂ ಸುಧಾರಣೆ ಮತ್ತು ಎ. ಕೆ. ಜಿ.

ಕೆಲವು ರಾಜ್ಯಗಳಲ್ಲಿ ಅಲ್ಪ ಸ್ವಲ್ಪವಾದರೂ ಭೂ ಸುಧಾರಣೆಗಳ ಜ್ಯಾರಿಯಾಗಿದ್ದರೆ ಅದು ಬಲಶಾಲಿಯಾದ ಸಾಮೂಹಿಕ ಹೋರಾಟಗಳಿಂದಾಗಿ. ಕೇರಳ ಮತ್ತು ಪಶ್ಚಿಮ ಬಂಗಾಳ ಇದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿವೆ. ಇದು ಭಾರತದ ರೈತ ಆಂದೋಲನಕ್ಕೆ ಕಾಂ. ಎ. ಕೆ. ಜಿ. ಯವರ ಕೊಡುಗೆ. ಸಮಸ್ಯೆಯ ಪರಿಹಾರಕ್ಕೆ ಶಕ್ತಿಶಾಲೀ ಸಾಮೂಹಿಕ ಆಂದೋಲನ ಏಕಮಾತ್ರ ಮಾರ್ಗವೆಂಬ ತೀರ್ಮಾನಕ್ಕೆ ಬಂದರು. ಈ ಪ್ರಜ್ಞೆ ಈಗ ಎಲ್ಲಾ ಪ್ರದೇಶಗಳಿಗೆ ಹರಡುತ್ತಿದೆ. ಎ. ಕೆ. ಜಿ.ಯ ನೇತೃತ್ವದಲ್ಲಿ ಅಖಿಲ ಭಾರತ ಕಿಸಾನ್ ಸಭಾ ರೈತರ, ಭೂಹೀನ ಕೃಷಿ ಕೂಲಿಗಾರರ ಹೋರಾಟಗಳನ್ನು ನಡಸುವಲ್ಲಿ ಹಾಗೂ ತನ್ಮೂಲಕ ರೈತಾಪಿ ವರ್ಗದ ಒಂದು ವಿಭಾಗದಲ್ಲಿ ರಾಜಕೀಯ ಪ್ರಜ್ಞೆ ಮೂಡಿಸುವಲ್ಲಿ ಪ್ರಧಾನ ಪಾತ್ರ ವಹಿಸಿತು.

ನ್ಯಾಯಾಲಯದಲ್ಲಿ ಹೋರಾಟ

ಎ. ಕೆ.ಜಿ. ಒಬ್ಬ ಸರ್ವಮಾನ್ಯ ಕ್ರಾಂತಿಕಾರೀ ಮುಖಂಡರಾಗಿದ್ದಂತೆ, ಒಬ್ಬ ಪ್ರಸಿದ್ಧ ಕಾನೂನು ಹೋರಾಟಗಾರರೂ ಕೂಡಾ. 1950 ರಲ್ಲಿ ಅವರು ಮದ್ರಾಸ್ ರಾಜ್ಯದ ವಿರುದ್ಧ ಸ್ಥಾನಬದ್ಧತಾ ಶಾಸನವನ್ನು ಪ್ರಶ್ನಿಸಿ ಹಾಕಿದ ದಾವೆ ಮೊದಲನೇ ಎ.ಕೆ.ಜಿ. ಗೋಪಾಲನ್ ದಾವೆಯೆಂದು ಕಾನೂನು ವಿದ್ಯಾರ್ಥಿಗಳಿಗೆ ಚಿರಪರಿಚಿತವಾಗಿದೆ. ದೇಶದ ಸರ್ವೋಚ್ಚ ನ್ಯಾಯಾಲಯ ಅನಿವಾರ್ಯವಾಗಿ ಸಂವಿಧಾನದ ಮೂರನೇ ಭಾಗ ಅಂದರೆ ಮೂಲಭೂತ ಹಕ್ಕುಗಳಿಗೆ ಸಂಬಂಧಪಟ್ಟ ಭಾಗವನ್ನು ವಿಶ್ಲೇಷಿಸಬೇಕಾಗಿ ಬಂದ ಮೊತ್ತಮೊದಲಿನ ಮೊಕದ್ದಮೆ ಇದು. "ವೈಯಕ್ತಿಕ ಸ್ವಾತಂತ್ರ್ಯ" ಎಂಬ ಪದದ ವ್ಯಾಪ್ತಿಯೇನು, ಮೂಲಭೂತ ಹಕ್ಕುಗಳು ಪರಸ್ಪರ ಸಂಬಂಧವೇನು ? "ಕಾನೂನು" ಎಂದರೇನು ? ಎಂಬ ಮೂಲ ಭೂತ ಪ್ರಶ್ನೆಗಳು ಇದರಲ್ಲಿ ಮುಖ್ಯವಾಗಿದ್ದವು. ಎ.ಕೆ.ಜಿ. ಈ ಕೇಸಿನಲ್ಲಿ ಸೋತರು. ಆದರೂ ಇದಕ್ಕೆ ಸಂಬಂಧ ಪಟ್ಟ ತೀರ್ಪನ್ನು ನೋಡಿದರೆ ಎ.ಕೆ.ಜಿ.ಯವರ ಈ ದಾವೆ ಭಾರತದ ಸಂವಿಧಾನಿಕ ಕಾನೂನಿನ ತಳಪಾಯ ಹಾಕಿತೆಂದು ಧೈರ್ಯವಾಗಿ ಹೇಳಬಹುದೆಂದಿದ್ದಾರೆ ಆರ್. ಶಂಕರ ದಾಸನ್ ಥಂಪಿ.

1965ರಲ್ಲಿ ಸುಪ್ರೀಂ ಕೋರ್ಟಿನಲ್ಲಿ ಭಾರತ ಸರ್ಕಾರದ ವಿರುದ್ಧ ಎ.ಕೆ.ಜಿ. ಯವರು ಭಾರತ ರಕ್ಷಣಾ ಶಾಸನದ ಪ್ರಕಾರ ಎಂ.ಪಿ.ಗಳ ಬಂಧನವನ್ನು ಪ್ರಶ್ನಿಸಿ ಹಾಕಿದ ರಿಟ್ ಅರ್ಜಿ 2ನೇ ಎ. ಕೆ. ಗೋಪಾಲನ್ ದಾವೆಯೆಂದು ಪ್ರಸಿದ್ಧವಾಗಿದೆ. ಸಂಸತ್ತಿನ ಕಲಾಪಗಳಲ್ಲಿ ಭಾಗವಹಿಸದಂತೆಮಾಡಿ ಸಂಸತ್ ಸದಸ್ಯರ ಸಂವಿಧಾನಿಕ ಹಕ್ಕನ್ನು ಇದು ಮೊಟಕು ಮಾಡುತ್ತದೆ ಎಂದು ವಾದಿಸಲಾಗಿತ್ತು. ಈ ವಾದವನ್ನು ನ್ಯಾಯಾಲಯ ಒಪ್ಪಿಕೊಂಡಿದ್ದರೆ 1975ರ ತುರ್ತುಪರಿಸ್ಥಿತಿಯ ಕಾಲದ ಬೆಳವಣಿಗೆಗಳನ್ನು ತಡೆಯಲು ಸುಪ್ರೀಂಕೋರ್ಟಿಗೆ ಸಾಧ್ಯವಾಗುತ್ತಿತ್ತು ಎಂದು ಎಕೆಜಿಯವರ ಜತೆ ರಿಟ್ ಅರ್ಜಿ ಹಾಕಿದ್ದ ಅಡ್ವೊಕೇಟ್ ಬೆರಿಮನ್ ಭಾವಿಸುತ್ತಾರೆ.

ಎ.ಕೆ.ಜಿ.ಯವರು ತಮ್ಮ ವಕೀಲರಿಗೂ ಪಾಯಿಂಟುಗಳನ್ನು ಹಾಕಿ ಅವರಿಗಿಂತಲೂ ಪರಿಣಾಮಕಾರಿಯಾಗಿ ವಾದ ಮಾಡುತ್ತಿದ್ದರೆಂದು ಖ್ಯಾತ ನ್ಯಾಯಾಮೂರ್ತಿ ವಿ.ಆರ್. ಕೃಷ್ಣ ಐಯ್ಯರ್ ಹೇಳಿದ್ದಾರೆ. ಪರಿಣಾಮದ ಪರಿವೆಯಿಲ್ಲದೇ ಕಾರ್ಮಿಕರ, ರೈತರ ಪರವಾಗಿ ಧುಮುಕುತ್ತಿದ್ದುದರಿಂದ ಎ.ಕೆ.ಜಿ. ಹಲವಾರು ಬಾರಿ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸಿಲುಕಿಕೊಂಡಿದ್ದರು. ಹೀಗಾದಾಗಲೆಲ್ಲಾ 1940 ರ ಹಾಗೂ 50ರ ದಶಕದಲ್ಲಿ ಅವರ ಇಂತಹ ಕೇಸುಗಳನ್ನು ನಡೆಸಿಕೊಟ್ಟಿರುವ ನ್ಯಾಯಮೂರ್ತಿ ಅಯ್ಯರ್ "ಅವರು ನನಗೆ ಕೇಸನ್ನು ಪೂರ್ಣವಾಗಿ ವಿವರಿಸುತ್ತಿದ್ದರು ಮಾತ್ರವಲ್ಲ ಪಾಟೀಸವಾಲಿನ ಪ್ರಶ್ನೆಗಳನ್ನು ಕೂಡಾ ಹೇಳಿ ಕೊಡುತ್ತಿದ್ದರು. ಎ.ಕೆ.ಜಿ. ನ್ಯಾಯಾಲಯದಲ್ಲಿದ್ದಾರೆಂದರೆ ಜನ ಭಾರೀ ಸಂಖ್ಯೆಯಲ್ಲಿ ಬಂದು ಸೇರುತ್ತಿದ್ದರು. ಮೊಕದ್ದಮೆ ರೋಚಕವಾಗಿಬಿಡುತ್ತಿತ್ತು" ಎಂದಿದ್ದಾರೆ.

ಇಂತಹ ಒಂದು ಮೊಕದ್ದಮೆಯ ಬಗ್ಗೆ ಅವರ ಮಾತುಗಳಲ್ಲೇ ಆಡಳಿತ ಕೇಳಿ—"ಅಸಂತೃಪ್ತಿ ಹರಡಿಸಿದ್ದಾರೆಂಬ ಒಂದು ಮೊಕದ್ದಮೆಯ ವಿಚಾರಣೆ ನಡೆಯುತ್ತಿತ್ತು. ಒಬ್ಬ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಪ್ರಮುಖ ಸಾಕ್ಷಿಯಾಗಿದ್ದರು. ಎ.ಕೆ.ಜಿ. ಪತ್ರಗಳ ಒಂದು ಕಂತೆಯನ್ನು ನನಗೆ ಕೊಟ್ಟು ಪಾಟೀಸವಾಲಿನ ಪ್ರಶ್ನೆಗಳನ್ನು ಸೂಚಿಸಿದ್ದರು. ಅವುಗಳಲ್ಲಿ ಕೆಲವು ಉತ್ತಮವಾಗಿದ್ದವು. ಇನ್ನು ಕೆಲವು ಸಾರ್ವಜನಿಕರಲ್ಲಿ ಈ ಮೊಕದ್ದಮೆ ಹೂಡಿದ ಪೋಲೀಸರ ಮರ್ಯಾದೆಯನ್ನು ಧೂಳಿಪಟ ಮಾಡುವಂತಿದ್ದರೂ 'ಪುರಾವೆ ಶಾಸನ'ದ ಪ್ರಕಾರ ಅಗತ್ಯವಾಗಿದ್ದವು. ಅಗತ್ಯ ಪ್ರಶ್ನೆಗಳನ್ನು ಕೇಳಿದ ನಂತರ ಉಳಿದ ಪ್ರಶ್ನೆಗಳನ್ನು ನಾನು ಕೇಳುತ್ತೇನೋ ಇಲ್ಲವೋ ಎಂಬ ಆತಂಕದಿಂದ ಎ.ಕೆ.ಜಿ. ನನ್ನತ್ತ ನೋಡುತ್ತಿದ್ದರು. ನಾನು ಈ ಸಂದಿಗ್ಧ ಆತಂಕದಿಂದಉಳಿಯಲು ನನ್ನದೊಂದು ಮಹತ್ವದ ಅಪೀಲು ಜಿಲ್ಲಾ ಕೋರ್ಟಿನಲ್ಲಿ ಬಂದಿರುವುದರಿಂದ ನನಗೆ ಹೋಗಲು ಪಾಟೀಸವಾಲನ್ನು ಎ.ಕೆ.ಜಿ. ಮೂಲಕ ಮಾಡಿಸಲು ಅನುಮತಿ ನೀಡಬೇಕೆಂದು ಮ್ಯಾಜಿಸ್ಟ್ರೇಟರಿಗೆ ಹೇಳಿದೆ. ಇದರಿಂದ ಸಾಕ್ಷಿ ಥರಥರ ನಡುಗಿದರು ಮಾತ್ರವಲ್ಲ ಮಾಜಿಸ್ಟ್ರೇಟ್‌ಗೆ ಕೂಡಾ ಎ.ಕೆ.ಜಿ. ಯವರ ಹೆಸರಿನಿಂದ ಭಯಗೊಂಡಂತಿತ್ತು. ಎ.ಕೆ.ಜಿ. ಪಾಟೀಸವಾಲಿಗೆ ನಿಂತಿದ್ದರೆ ನ್ಯಾಯಾಲಯ ನಗೆಗಡಲಲ್ಲಿ ತುಂಬಿ ಹೋಗಿ ಸಭೆಯ ಸಹಾನುಭೂತಿ ಆಪಾದಿತರ ಪರವಾಗಿ ತಿರುಗುವುದು ಖಂಡಿತವಾಗಿತ್ತು. ಆದ್ದರಿಂದ ಮ್ಯಾಜಿಸ್ಟ್ರೇಟ್ ನನ್ನ ಪಾರ್ಥನೆಯನ್ನು ಮನ್ನಿಸಲಿಲ್ಲ ನಾನು ಅಡ್ಜರ್ನ್‌ಮೆಂಟ್ ತಗೊಂಡು, ನಂತರ ಎ.ಕೆ.ಜಿ.ಯವರಿಗೆ ಸಾಕಷ್ಟು ತೃಪ್ತಿಯಾಗುವಂತೆ ಪಾಟೀಸವಾಲನ್ನು ಮುಗಿಸಿದೆ."

ಇದರರ್ಥ ಎ.ಕೆ.ಜಿ. ಯವರಿಗೆ ಬೂರ್ಜ್ವಾ ನ್ಯಾಯಾಲಯಗಳ ಬಗ್ಗೆ ಏನಾದರೂ ಭ್ರಮೆಯಿತ್ತೆಂದೇನೂ ಅಲ್ಲ ಆದರೆ ಇವನ್ನು ಅಗತ್ಯಕ್ಕನುಗುಣವಾಗಿ ಬಳಸಿಕೊಳ್ಳಲು ಹಿಂದೆಗೆಯುವ ಪಂಥವಾದಿಯಾಗಿರಲಿಲ್ಲ. ಅವರು 1952ರಿಂದ ಅಂತಿಮಗಳಿಗೆಯವರೆಗೆ ಸಂಸತ್ ಸದಸ್ಯರಾಗಿದ್ದ ಎ.ಕೆ.ಜಿ. ಪಾರ್ಲಿಮೆಂಟಿನ ಪಾತ್ರದ ಬಗ್ಗೆಯೂ ಭ್ರಮೆಯಿಟ್ಟುಕೊಂಡಿರಲಿಲ್ಲ. ಅವರು ಸಂಸತ್ತನ್ನು ಹೊರಗಣ ಜನತಾ ಆಂದೋಲನಗಳನ್ನು ಬಲಪಡಿಸಲು ಬಳಸಿಕೊಂಡರು. ಇಷ್ಟು ದೀರ್ಘಕಾಲ ಸಂಸತ್ ಸದಸ್ಯರಾಗಿದ್ದೂ ಅವರು ಜನಸಮೂಹಗಳ ನಡುವಿನ ವ್ಯಕ್ತಿಯಾಗಿಯೇ ಉಳಿದರು. ಸಂಸತ್ ಭವನದ ಆವರಣ ದಾಟಿ ಬಂದ ಕೂಡಲೇ ಬೀದಿಗಳಲ್ಲಿ ರೈತರ, ಕಾರ್ಮಿಕರ ಹೋರಾಟಗಳಲ್ಲಿ ಭಾಗಿಯಾಗುತ್ತಿದ್ದರು. ಮತ್ತೆ ಸಂಸತ್ತಿಗೆ ಹಿಂತಿರುಗಿ ಅವರ ದುಃಖ ದುಮ್ಮಾನಗಳಿಗೆ ದನಿ ನೀಡಿ ಅವರ ಹೋರಾಟಗಳನ್ನು ಬಲಪಡಿಸುತ್ತಿದ್ದರು. ಪ್ರಜಾಪ್ರಭುತ್ವ ಹಾಗೂ ಸಮಾಜವಾದದ ಸ್ಥಾಪಿಸುವ ಜನತಾ ಆಂದೋಲನದ ಒಟ್ಟು ಪರಿಪ್ರೇಕ್ಷ್ಯದಲ್ಲಿ ಸಂಸತ್ತು ಮತ್ತು ನ್ಯಾಯಾಲಯಗಳ ಪಾತ್ರವೇನೆಂಬುದರ ಪೂರ್ಣ ಅರಿವು ಇದ್ದ ಮುಖಂಡರಾಗಿದ್ದರು ಎ.ಕೆ.ಜಿ.

ವಿಶ್ವಶಾಂತಿ ಮತ್ತು ಮಹಿಳೆ

[3ನೇ ಪುಟದಿಂದ]

ಹೇಳಿಯುಳಿಕೆಗಳೊಂದಿಗೆ, ಇಂದಿನಬಂಡವಾಳಶಾಹೀ ಮೌಲ್ಯಗಳೂ ಕೂಡಿ, ದುಡಿಯುವ ಜನತೆಯನ್ನು ಶೋಷಿಸುತ್ತಿರುವುದು ಕಾಣುತ್ತಿದ್ದೇವೆ.

ಇಂದಿನ ಆಳುವ ಪಕ್ಷಗಳು ದೇಶದ ಆರ್ಥಿಕ ಸಂಬಂಧಗಳಲ್ಲಿ, ಜನಪರವಾದ ಯಾವುದೇ ಬದಲಾವಣೆ ತರಲಾಗದೇ, ಆದರಿಂದುಂಟಾಗುವ ಜನರ ಅಸಂತೃಪ್ತಿಯನ್ನು ನಿವಾರಿಸಲಾಗದೇ, ಬೆಳೆದು ಬರುತ್ತಿರುವ ದುಡಿಯುವ ವರ್ಗದ ಹೋರಾಟಗಳನ್ನು ನಿಯಂತ್ರಿಸುತ್ತಿವೆ. ಇದಕ್ಕಾಗಿ ನಮ್ಮ ದೇಶದ ವಿಭಿನ್ನ ಜಾತಿ-ಮತ, ಪಂಗಡಗಳನ್ನು ಬಳಸಿಕೊಂಡು, ಧರ್ಮವನ್ನು ರಾಜಕೀಯದೊಂದಿಗೆ ಬೆಸೆದು, ಭಯೋತ್ಪಾದಕರನ್ನೂ ಹುಟ್ಟುಹಾಕಿ, ಬೆಳೆಸಿ, ಪ್ರಜಾಸತ್ತಾತ್ಮಕ ಹೋರಾಟಗಳನ್ನು ದಿಕ್ಕೆಡಿಸಿ, ತಮ್ಮ ಪಟ್ಟಬದ್ರ ಹಿತಾಸಕ್ತಿಗಳನ್ನು ಗಟ್ಟಿಗೊಳಿಸಿಕೊಳ್ಳುತ್ತಿದ್ದಾರೆ. ಈ ಹಿಂದೆ ಉದಾಹರಣೆಗಳಾಗಿದ್ದ, ಅಸ್ಸಾಂ. ಪಂಜಾಬ್‌ಗಳು ಸಾಲದೆಂಬಂತೆ, ಈಗ, ಗೂರ್ಖಾ ಚಳುವಳಿಗೂ ಕೇಂದ್ರ ಸರ್ಕಾರ ಕುಮ್ಮಕ್ಕು ಕೊಡುತ್ತಿರುವುದು, ರಾಜೀವ್‌ಗಾಂಧಿಯವರೂ ಅದಕ್ಕೆ ತಕ್ಕವಾದ ಹೇಳಿಕೆಗಳನ್ನು ಕೊಡುತ್ತಿರುವುದೂ ವಿಷಾದನೀಯ.

ಇಂಥಹ ಪರಿಸ್ಥಿತಿಯಲ್ಲೂ ದೇಶವನ್ನು ಛಿದ್ರಗೊಳಿಸುತ್ತಿರುವ ಶಕ್ತಿಗಳಿಗೆ ಸರ್ವರೀತಿಯ ಸಹಾಯವನ್ನು ನೀಡುತ್ತಿರುವ ಅಮೇರಿಕನ್ ಸರ್ಕಾರದ ನೀತಿಯನ್ನು ಹೊರಗೆಳೆಯದೆ ಕಣ್ಣುಮುಚ್ಚಿ ಕುಳಿತಿರುವ ಕಾಂಗ್ರೆಸ್ ಸರ್ಕಾರವನ್ನು ಖಂಡಿಸಬೇಕಾಗಿದೆ.

ಜಾತ್ಯಾತೀತ ರಾಷ್ಟ್ರವೆಂದು ಸಂವಿಧಾನದಲ್ಲಿ ಹೇಳಿದ್ದರೂ ಆಳುವ ಸರಕಾರಗಳು ಧಾರ್ಮಿಕ ಮೂಲಭೂತವಾದಿಗಳಿಗೆ ಶರಣಾದ ಸಂದರ್ಭಗಳು ಬಹಳ. ಉದಾಹರಣೆಗೆ- ವಿವಾಹ ವಿಚ್ಛೇದಿತ ಮುಸ್ಲಿಂ ಮಹಿಳೆಯರ ಕಾನೂನು [ಶಾ ಬಾನು ಕೇಸಿನಲ್ಲಿಯ ಸುಪ್ರೀಂ ಕೋರ್ಟ್ ತೀರ್ಪು]

ಕರ್ನಾಟಕದಲ್ಲಿಯ ಮೌಲ್ಯಾಧಾರಿತವೆಂದು ಹೇಳಿಕೊಳ್ಳುವ ಜನತಾ ಸರಕಾರ, ಕುದುರೆ ಮೋತಿ ಪ್ರಕರಣದಲ್ಲೂ ಮತ್ತು ಇತ್ತೀಚೆಗೆ ಉಜಿರೆಯಲ್ಲಾದ ಪದ್ಮಲತಾ ಪ್ರಕರಣದಲ್ಲಿಯೂ ಮಠಾಧೀಶರ ಪರವಾಗಿ ನಿಲುವನ್ನು ತಾಳಿದ್ದು ಸರ್ವವಿದಿತ.

ಮಹಿಳೆ ಇಂತಹ ಅನೇಕ ಅನ್ಯಾಯಗಳ ವಿರುದ್ಧ ಹೋರಾಡಲು ಪ್ರಜಾಪ್ರಭುತ್ವವಾದೀ ವಾತಾವರಣ ಅವಶ್ಯವಾಗಿದ್ದು, ಜಾಗತಿಕ ಮಟ್ಟದಲ್ಲೂ ಶಾಂತಿಸ್ಥಾಪನೆಯಾದಾಗ ಈ ಎಲ್ಲವನ್ನೂ ಸಾಧಿಸಲು ಯಶಸ್ವಿಯಾದವು.

ನಮ್ಮ ಜವಾಬ್ದಾರಿ

ಜಗತ್ತನ್ನು ಅಣ್ವಸ್ತ್ರ ಯುದ್ಧದ ಪಂದ್ಯಾಟದಲ್ಲಿ ನೂಕಿ, ಇಡೀ ಮಾನವನ ಅಸ್ತಿತ್ವವನ್ನೇ ಅಳಿಸಲು ಪ್ರಯತ್ನಪಡುವ ಅಮೇರಿಕನ್ ಸಾಮ್ರಾಜ್ಯವಾದಿಗಳ ವಿರುದ್ಧ, ಅವರ ಸರ್ವಾಧಿಕಾರೀ ಮನೋಭಾವದ ವಿರುದ್ಧ, ಮುಖ್ಯವಾಗಿ ಮನುಷ್ಯ ಮನುಷ್ಯನನ್ನು ಶೋಷಿಸುವುದರ ವಿರುದ್ಧ ಧ್ವನಿ ಎತ್ತಬೇಕಾಗಿದೆ. ಸೋವಿಯತ್‌ಯೂನಿಯನ್ ಶಾಂತಿಗಾಗಿ ಮಾಡುವ ಪ್ರಯತ್ನಗಳನ್ನು ಬೆಂಬಲಿಸಬೇಕಾಗಿದೆ. ಅಣುಯುದ್ಧ ತಾರಾಯುದ್ಧಗಳಿಂದ ಒದಗಬಹುದಾದ ಅಪಾಯಗಳ ಸಂಪೂರ್ಣ ತಿಳುವಳಿಕೆಯನ್ನು ಎಲ್ಲ ಜನರಿಗೆ ತಿಳಿಸಬೇಕಾಗಿದೆ. ಮಹಿಳೆಯರ ಮತ್ತು ದುಡಿಯುವ ಜನರ ಹಕ್ಕುಗಳಿಗಾಗಿ, ಶೋಷಣಾ ರಹಿತವಾದ ಸಮಾಜದ ನಿರ್ಮಾಣಕ್ಕಾಗಿ, ಬೇಕಾಗುವ ತಿಳುವಳಿಕೆಯನ್ನು ಜನಕ್ಕೆ ಒದಗಿಸಿ ತನ್ನ ಹೋರಾಟಗಳನ್ನು ರೂಪಿಸುವುದೇ ನಮ್ಮ ಇಂದಿನ ಜವಾಬ್ದಾರಿಯಾಗಿದೆ. ○

ಹಂಚು ಕಾರ್ಮಿಕರ ಮೇಲೆ ಲಾಠಿ ಚಾರ್ಜ್ – ಸಿಐಟಿಯು ಖಂಡನೆ

ದ. ಕ. ಜಿಲ್ಲೆಯ 7000 ಕ್ಕೂ ಮಿಕ್ಕಿ ಹಂಚು ಕಾರ್ಮಿಕರು ಪರಿಳಿತ ತುಟ್ಟಿಭತ್ತೆ ಜಾರಿಯಾಗಬೇಕು, ವೇತನ ಮತ್ತು ಬೋನಸ್ಸು ಹೆಚ್ಚಳವಾಗಬೇಕೆಂಬ ಕೇಳಿಕೆಗಾಗಿ ನಡೆಸುತ್ತಿರುವ ಹೋರಾಟಕ್ಕೆ ಸಿ.ಐ.ಟಿ.ಯು. ಜಿಲ್ಲಾ ಸಮಿತಿ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತದೆ. ತಾ. 13-3-87ಕ್ಕೆ ಕಾ. ಪಿ. ರಾಮಚಂದ್ರರಾವ್ ಅಧ್ಯಕ್ಷತೆಯಲ್ಲಿ ನಡೆದ ಸಭೆ ಹೋರಾಟ ನಡೆಸುತ್ತಿರುವ ಕಾರ್ಮಿಕರ ಮೇಲೆ ಲಾಠಿ ಚಾರ್ಜು ನಡೆಸಿ ಟಿಯರ್‌ಗೇಸ್ ಪ್ರಯೋಗಿಸಿ 2000 ಕಾರ್ಮಿಕರನ್ನು ಬಂಧಿಸಿ 500 ಕಾರ್ಮಿಕರನ್ನು ಜೈಲಿಗೆ ಕಳುಹಿಸಿದ ಕೃತ್ಯವನ್ನು ಖಂಡಿಸಿತು. ಈ ಅನ್ಯಾಯವನ್ನು ಖಂಡಿಸಿ ಹಾಗೂ ಹಂಚು ಕಾರ್ಮಿಕರ ಬೇಡಿಕೆಗೆ ಬೆಂಬಲ ನೀಡಿ ಇತ್ಯರ್ಥ ಮಾಡಲು ಸರ್ಕಾರವನ್ನು ಒತ್ತಾಯಿಸಲು ಸಿಐಟಿಯು ಗೆ ಸೇರಿದ ಎಲ್ಲಾ ಯೂನಿಯನ್ನುಗಳಿಗೆ ಕರೆ ನೀಡಿತು.

ಸರಕಾರದ ಕಾರ್ಮಿಕ ನೀತಿಯ ವಿರುದ್ಧ ರಾಜ್ಯಾದ್ಯಂತ ನಡೆಯುವ 'ಧರಣಿ ಸತ್ಯಾಗ್ರಹ' ವನ್ನು ಮಾರ್ಚಿ 26ರಂದು ಉಡುಪಿ, ಕುಂದಾಪುರ, ಮಂಗಳೂರು, ಬಂಟ್ವಾಳ ತಾಲೂಕುಗಳಲ್ಲಿ ನಡೆಸಲು ನಿರ್ಣಯಿಸಲಾಯಿತು.

ಬಲ್ಮಠ ರಸ್ತೆಯನ್ನು ಏಕಮುಖ ರಸ್ತೆಯಾಗಿ ಮಾಡಿರುವುದನ್ನು ವಿರೋಧಿಸಿ ಕೆಲವು ರಿಕ್ಷಾ ಪಾರ್ಕುಗಳಲ್ಲಿ ಅನ್ಯಾಯವಾಗುವುದನ್ನು ವಿರೋಧಿಸಿ ತಾ. 21-3-86 ರಂದು ರಿಕ್ಷಾ ಚಾಲಕರು ನಡೆಸುವ ಪ್ರದರ್ಶನಕ್ಕೆ ಸಮಿತಿ ಸಭೆ ಪೂರ್ಣ ಬೆಂಬಲ ವ್ಯಕ್ತಪಡಿಸಿತು.

ತೋಟ ಕಾರ್ಮಿಕರ ಸಭೆ

ಕೇರಳ, ತಮಿಳುನಾಡುಗಳಲ್ಲಿನ ತೋಟ ಕಾರ್ಮಿಕರ ಸಂಬಳದ ಒಪ್ಪಂದದ ಆಧಾರದ ಮೇಲೆ ಕರ್ನಾಟಕದ ತೋಟ ಕಾರ್ಮಿಕರ ಸಂಬಳದ ಬಗ್ಗೆ ಹೊಸ ಬೇಡಿಕೆಯನ್ನು ಮುಂದಿಟ್ಟು ಹೋರಾಟ ನಡೆಸುವ ತೀರ್ಮಾನವನ್ನು ಫೆ.14ರಂದು ಚಿಕ್ಕಮಗಳೂರಿನಲ್ಲಿ ನಡೆದ ಕರ್ನಾಟಕ ಪ್ರೊವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರೀ ಸಮಿತಿ ಸಭೆ ಕೈಗೊಂಡಿದೆ.ಪ್ರಸ್ತುತ ಕೇರಳ ತಮಿಳುನಾಡುಗಳ ತೋಟ ಕಾರ್ಮಿಕರು ಪಡೆಯುತ್ತಿರುವ ಕೂಲಿಗೆ ಹೋಲಿಸಿದಲ್ಲಿ ಕರ್ನಾಟಕದ ತೋಟ ಕಾರ್ಮಿಕರು ಕಡಿಮೆ ಕೂಲಿ ಪಡೆಯುತ್ತಿದ್ದಾರೆ. ಸಂಘದ ಅಧ್ಯಕ್ಷರಾದ ಕಾಂ.ಸಿ.ನಂಜುಂಡಪ್ಪನವರು ಅಧ್ಯಕ್ಷತೆವಹಿಸಿದ್ದ ಸಭೆಯಲ್ಲಿ ಸಂಘದ ಕಾರ್ಯದರ್ಶಿ ಕಾ.ವಿ. ಸುಕುಮಾರ್‌ಸಂಘದ ಕಾರ್ಯ ಚಟುವಟಿಕೆಯ ಬಗ್ಗೆ ವರದಿ ಮಂಡಿಸಿದರು. ವರದಿಯ ಮೇಲಿನ ಚರ್ಚೆಯಲ್ಲಿ ಕಾ. ಎ. ಸಿ. ಕೇಶವ, ಕೆ.ಸುಕುಮಾರ್ ಮೊದಲಾದ ಸಂಗಾತಿಗಳು ಭಾಗವಹಿಸಿದ್ದರು.

1987ರ ಮೇ11ರಿಂದ 15ರವರೆಗೆ ಬಾಂಬೆಯಲ್ಲಿ ನಡೆಯಲಿರುವ ಸಿ.ಐ.ಟಿ.ಯು. ಮ್ಮೇಳನಕ್ಕೆ ಕಾ.ಎ.ಸಿ.ಕೇಶವ ಅವರನ್ನು ಸಭೆ ಆಯ್ಕೆಮಾಡಿತು.

ಸಂಘದ ಸಂಘಟಕರಾದ ಕಾ. ಅಣ್ಣಿಯವರನ್ನು ಕಳಸ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ವಿನಾಕಾರಣ ಥಳಿಸಿರುವುದನ್ನು ಸಭೆ ಖಂಡಿಸಿ ತಪ್ಪಿತಸ್ಥ ಅಧಿಕಾರಿಯ ಮೇಲೆ ಸೂಕ್ತ ಕ್ರಮ ಜರುಗಿಸಬೇಕೆಂದು ಒತ್ತಾಯಿಸುವ ಕಡೂರಿನ ಸ್ಟಾಂಡರ್ಡ್ ಟೈಲ್ ಕಾರ್ಖಾನೆಯ ಕಾರ್ಮಿಕರ ಹೋರಾಟವನ್ನು ಬೆಂಬಲಿಸುವ ನಿರ್ಣಯಗಳನ್ನು ಸಭೆ ಅಂಗೀಕರಿಸಿತು.

ಗುಲ್ಬರ್ಗಾ ಜಿಲ್ಲಾ ರೈತ ಸಂಘದ ಸಭೆ

ಕರ್ನಾಟಕ ಪ್ರಾಂತ ರೈತ ಸಂಘದ ಆಳಂದ ತಾಲೂಕು ಸಮಿತಿಯ ಸಭೆ ಮಾರ್ಚ್ 8ರಂದು ಕಾ. ಬಸವ ಮರಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಜಿಲ್ಲಾ ಸಮಿತಿ ಸಭೆಯ ವರದಿಯನ್ನು ಕಾ ಮಾರುತಿ ಮಾನ್ಪಡೆ ಕಾಂ. ಕಲ್ಲಪ್ಪ ಕಿರಣಗಿ ನೀಡಿದರು. ಜಿಲ್ಲಾದ್ಯಂತ ಒಟ್ಟು 30,000 ಸದಸ್ಯತ್ವ ನೋಂದಾಯಿಸಲು ತೀರ್ಮಾನಿಸಿರುವ ಪ್ರಕಾರ ಆಳಂದ ತಾಲೂಕಿನಲ್ಲಿ 15 ಸಾವಿರ ಸದಸ್ಯತ್ವವನ್ನು ನೋಂದಾಯಿಸಲು ಸಭೆ ನಿರ್ಣಯಿಸಿದೆ. ತಾಲೂಕಿನ ಬರಗಾಲದ ಬಗ್ಗೆ ಕುಡಿಯುವ ನೀರು, ದನಕರುಗಳ ಮೇವು, ಉದ್ಯೋಗದ ಕುರಿತು ಸಭೆ ಚರ್ಚಿಸಿತು. ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸುವಂತೆ ಒತ್ತಾಯಿಸಲು, ಮತ್ತಿತರ ಸಮಸ್ಯೆಗಳ ನಿವಾರಣೆಗಾಗಿ ಸರ್ಕಾರವನ್ನು ಒತ್ತಾಯಿಸಲು ರೈತರು ಹೋರಾಟ ನಡೆಸಬೇಕೆಂದು ಸಭೆ ಕರೆ ನೀಡಿದೆ. ಮೇಲ್ಕಂಡ ಬೇಡಿಕೆಗಳ ಬಗ್ಗೆ ಮಾರ್ಚ್ 13ರಂದು ರೈತ ಮುಖಂಡರಾದ ಕಾಂ. ಅರುಣಕುಮಾರ್, ಕಾ. ಕಲ್ಲಪ್ಪ ಕಿರಣಗಿ, ಕಾ. ಬಾಬು ಮುಗಳಿ ಕಾ. ಮಾರುತಿ ಮಾನ್ಪಡೆ ಅವರ ನೇತೃತ್ವದ ನಿಯೋಗವೊಂದು ಜಿಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಮನವಿ ಪತ್ರ ಅರ್ಪಿಸಿದೆ.

ಕರ್ನಾಟಕ ಪ್ರಾಂತ ರೈತಸಂಘದ ಗುಲ್ಬರ್ಗಾ ಜಿಲ್ಲಾ ಸಮಿತಿ ಜಿಲ್ಲೆಯ ಪರಿಸ್ಥಿತಿಯ ಬಗ್ಗೆ ಅಧ್ಯಯನ ನಡೆಸಿ ಇಡೀ ಜಿಲ್ಲೆಯನ್ನು ಬರಪೀಡಿತ ಜಿಲ್ಲೆಯೆಂದು ಘೋಷಿಸಿ ಜಿಲ್ಲೆಯ ಸಮಸ್ಯೆಗಳನ್ನು ನಿವಾರಿಸಲು ಶಾಶ್ವತ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಮನವಿ ಅರ್ಪಿಸಿದೆ. ○

ಕುಡಿಯುವ ನೀರಿಗೆ ಒತ್ತಾಯ

ಬಂಟ್ವಾಳ ಪುರಸಭಾ ಪ್ರದೇಶಗಳಾದ ದೈಪಲ, ಕಾಮಾಜೆ, ಮಿತ್ತಕೋಡಿ,ಮಠದಗುಡ್ಡೆ,ಮಂಡಾಡಿ ಅರ್ಭಗುಡ್ಡೆ,ಬೊಂಡಾಲ ಮೊದಲಾದ ಪ್ರದೇಶಗಳ ನಾಗರಿಕರ ಪರವಾಗಿ ಕುಡಿಯುವ ನೀರಿನ ಪೂರೈಕೆಗೆ ಒತ್ತಾಯಿಸಿ ಸಹಿಗಳಿರುವ ಮನವಿಯನ್ನು ಮಾರ್ಚ್ 9ರಂದು ಪುರಸಭೆಯ ಅಧ್ಯಕ್ಷರಿಗೆ ಸಿ.ಪಿ.ಐ ಎಂ.ನ ಕಾರ್ಯದರ್ಶಿ ಶ್ರೀ ವಾಸುಗಟ್ಟಿ ಹಾಗೂ ಪುರಸಭಾ ಸದಸ್ಯ ಶ್ರೀ ಬಿ.ಚಂದಪ್ಪ ನಾಯ್ಕಹಾಗೂ ಇತರರು ಸಲ್ಲಿಸಿದರು.

ಮೇಲಿನ ಪ್ರದೇಶಗಳಲ್ಲಿ ಕಡು ಬಡವರೇ ವಾಸಿಸುತ್ತಿದ್ದು ಪ್ರತಿವರ್ಷವೂ ಕುಡಿಯುವ ನೀರಿಗಾಗಿ ಪರಿತಪಿ, ಪುರಸಭೆಗೆ ಮನವಿ ಪತ್ರ ಸಲ್ಲಿಸಿ,ಕೇಳಿಕೊಂಡರೂ ಕುಡಿಯುವ ನೀರಿನ ಬವಣೆಗೆ ಪರಿಹಾರ ದೊರೆಯಲಿಲ್ಲವೆಂದೂ ಮನವಿಯಲ್ಲಿ ಹೇಳಿದೆ.

ಕಳೆದ ವರ್ಷ ದೈಪಲ ಎಂಬ ಪ್ರದೇಶಕ್ಕೊಂದು ಕೊಳವೆ ಬಾವಿ ಕೊಡಿಸುವ ಭರವಸೆಯನ್ನು ಪುರಸಭಾ ಅಧ್ಯಕ್ಷರು ಆ ಪ್ರದೇಶದ ನಾಗರಿಕರಿಗೆ ನೀಡಿ, ಈ ಪ್ರದೇಶಕ್ಕೆ ಕೊಳವೆ ಬಾವಿ ಕೊರೆಯುವ ಯಂತ್ರದ ದಾರಿ ಹೋಗಲು ಒಂದುವರೆ ಕಿಲೋಮೀಟರು ಉದ್ದದ ರಸ್ತೆಯನ್ನು ಈ ಪ್ರದೇಶದ ನಾಗರಿಕರು ಶ್ರಮದಾನದಿಂದ ಮಾಡಿಕೊಟ್ಟರು. ಬಂಟ್ವಾಳ ಪುರಸಭೆಗೆ ಕಳೆದ ವರ್ಷ ಸರಕಾರದಿಂದ 13ಕೊಳವೆಬಾವಿ ಮಂಜೂರಾಗಿ ಬಂದ್ದಾಗ ಈ ಪ್ರದೇಶದ ನಾಗರಿಕರಿಗೆ ಕೊಟ್ಟ ಭಾಷೆಯನ್ನು ಪೂರೈಸದೆ ಈ ಪ್ರದೇಶಕ್ಕೆನಿಗದಿ ಪಡಿಸಿದ ಕೊಳವೆಬಾವಿಯನ್ನು ಪ್ರಭಾವಿತ ಒತ್ತಡಕ್ಕೆ ಮಣಿದು ಬೇರೆ ಕಡೆಯಲ್ಲಿ ಹಾಕಲಾಯಿತು 'ಎಂದು ಮನವಿಯಲ್ಲಿ ದೂರಲಾಗಿದೆ' ಮನವಿಯಲ್ಲಿ ತೋರಿಸಿರುವ ಎಲ್ಲಾ ಪ್ರದೇಶಗಳಿಗೆ ಕುಡಿಯುವ ನೀರು,ದಾರಿದೀಪ,ರಸ್ತೆ,ಇನ್ನಿತರ ಕೆಲಸಗಳನ್ನು ಗಮನ ಕೊಟ್ಟು ಮಾಡದಿದ್ದರೆ ಎಪ್ರಿಲ್ 10 ರಿಂದ ನಾಗರಿಕರು ಪುರಸಭೆಯ ಆಫೀಸಿನ ಮುಂದೆ ಸರದಿ ಸತ್ಯಾಗ್ರಹ ಮಾಡುವುದಾಗಿ ಮನವಿಯಲ್ಲಿ ಎಚ್ಚರಿಕೆ ನೀಡಿದೆ.

ಪದ್ಮಲತಾ ಕೊಲೆ ಪ್ರತಿಭಟಿಸಿ ಮೆರವಣಿಗೆ

ಉಜಿರೆ ಎಸ್.ಡಿ.ಎಂ ಕಾಲೇಜಿನ ವಿದ್ಯಾರ್ಥಿನಿ ಕು|| ಪದ್ಮಲತಾಳ ಕೊಲೆಯ ಬಗ್ಗೆ ಕೂಡಲೇ ನ್ಯಾಯಾಂಗ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಡಿ. ವೈ ಎಫ್. ಐ. ಹಾಸನ ನಗರ ಸಮಿತಿ ಕಾರ್ಯಕರ್ತರು ತಾ. 13-3-87 ರಂದು ಮೆರವಣಿಗೆ ನಡೆಸಿದರು.

ಮೆರವಣಿಗೆಯು ಹೇಮಾವತಿ ಪ್ರತಿಮೆಯಿಂದ ಹೊರಟು ನಗರದ ಪ್ರಮುಖ ಬೀದಿಗಳಲ್ಲಿ ತೆರಳಿ, ಪದ್ಮಲತಾಳನ್ನು ಕೊಲೆಸೈದ ಕೊಲೆಗಾರರನ್ನು ಕೂಡಲೇ ಬಂಧಿಸಬೇಕೆಂದು, ಪದ್ಮಲತಾಳ ಸಾವಿನ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು, ಪೋಲೀಸರ ನಿಷ್ಕ್ರಿಯತೆಯನ್ನು ಖಂಡಿಸುವ ಘೋಷಣೆಗಳೊಂದಿಗೆ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಸರ್ಕಾರಕ್ಕೆ ಮನವಿ ಅರ್ಪಿಸಲಾಯಿತು. ●

ಕ್ಯೂರಿಂಗ್ ಕಾರ್ಮಿಕರ ವಾರ್ಷಿಕ ಮಹಾಸಭೆ

ಕಾಫಿ ಕ್ಯೂರಿಂಗ್, ಸಾಮಿಲ್ಸ್ ಮತ್ತು ಇತರ ಕಾರ್ಮಿಕರ ಸಂಘದ ಮೂರನೆಯ ಮಹಾಸಭೆ ಕಾಂ. ಸಿ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಮಾರ್ಚ್ 1ರಂದು ಹಾಸನದಲ್ಲಿ ನಡೆಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ವಿ. ಸುಕುಮಾರ್ ಲಿಖಿತ ವರದಿ ಮಂಡಿಸಿದರು.

ಮುಂದಿನ ಕಾಲಾವಧಿಗೆ ಕಾಂ. ಸಿ. ನಂಜುಂಡಪ್ಪ ಅಧ್ಯಕ್ಷರಾಗಿ ಕಾಂ. ವಿ. ಸುಕುಮಾರ್ ಪ್ರಧಾನ ಕಾರ್ಯದರ್ಶಿಯಾಗಿ, ಕಾಂ. ಕೆ.ಟಿ, ರಾಘವೇಂದ ಸಹಾಯಕ ಕಾರ್ಯದರ್ಶಿಯಾಗಿ, ಹಾಗೂ ಕಾಂ ಜಿ.ವಿ. ಸತ್ಯನಾರಾಯಣ ಖಜಾಂಚಿಯಾಗಿ ಆಯ್ಕೆಯಾದರು. ○

ಮಹಿಳೆಯರ ಸಭೆ

15-3-1987ರಂದು ಬೆಂಗಳೂರಿನಲ್ಲಿ ಸಾಮೂಹಿಕ ಸಂಘಟನೆಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಸಭೆ ಕರೆಯಲಾಗಿತ್ತು. ಕಾಂ. ಸೂರ್ಯನಾರಾಯಣರಾವ್‌ರವರು ಈ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಖಂಡಿಸಲು, ಹಾಗೂ ಉನ್ನತವಾದ ಗುರಿಸಾಧನೆಗಾಗಿ ಮಹಿಳಾ ಸಂಘಟನೆ ಅವಶ್ಯಕತೆ ಕುರಿತು ತಿಳಿಸಿದರು.

ಈ ಸಭೆಯ ಅಧ್ಯಕ್ಷತೆಯನ್ನು ಕಾ. ರಾಜಮ್ಮನವರು ವಹಿಸಿದ್ದರು. ಕಾಂ. ಶಾಂತಕುಮಾರಿಯವರು ಈ ಸಭೆಯಲ್ಲಿ ಮಹಿಳೆಯರಿಗೂ ಹಾಗೂ ದೇಶದ ಸಮಸ್ಯೆಗಳಿರುವ ಸಂಬಂಧ ಹಾಗೂ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಹುಟ್ಟು ಮತ್ತು ಬೆಳವಣಿಗೆಯ ಕುರಿತು ಮಾತನಾಡಿದರು.

ಸಿ.ಐ.ಟಿ.ಯು. ಕೌನ್ಸಿಲ್ ಸದಸ್ಯರಾದ ಕಾಂ. ಕುರ್ಶಿದಾಬೇಗಂರವರು ಮಹಿಳಾ ಸಂಘಟನೆಯನ್ನು ಬೆಳೆಸುವ ಬಗ್ಗೆ ಮಾತನಾಡಿದರು. ಕಾ. ವಿಮಲಾರವರು ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಧ್ಯೇಯ ಧೋರಣೆ ಬಗ್ಗೆ ಮಾತನಾಡಿದರು. ●

ಕೇರಳ ಚುನಾವಣೆ : ನೂತನ ಪ್ರಚಾರ ಶೈಲಿ !

ಕೇರಳದಲ್ಲಿ ಕಾಂಗ್ರೆಸ್ (ಐ) ನೇತೃತ್ವದ ಐಕ್ಯ ಪ್ರಜಾಪ್ರಭುತ್ವರಂಗದ (UDF) ವಿರುದ್ಧ ಸಿಪಿಐ (ಎಂ) ನೇತೃತ್ವದ ಎಡಮತ್ತು ಪ್ರಜಾಪ್ರಭುತ್ವ ರಂಗದ (LDF) ನೂತನ ಶೈಲಿಯ ಚುನಾವಣಾ ಪ್ರಚಾರ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ 12.3.87 ರಂದು ವರದಿಯಾಗಿದೆ. ಮುಖ್ಯಮಂತ್ರಿ ಕರುಣಾಕರನ್ ಅವರ ಐಕ್ಯ ಪ್ರಜಾಪ್ರಭುತ್ವ ರಂಗದ ಸರಕಾರದ ಕಳೆದ ಐದು ವರ್ಷಗಳ ಆಳ್ವಿಕೆಯ ಅವಧಿಯಲ್ಲಿ ಆಪಾದಿಸಲಾಗಿದ್ದ 'ಭ್ರಷ್ಟಾಚಾರ' 'ಆಂತರಿಕ ಕಲಹ' ಮತ್ತು 'ಹಿಂಸೆ' ಗಳನ್ನು ಬಹಿರಂಗಗೊಳಿಸಲು ಮೂರು ವಿಶೇಷ ಪತ್ರಿಕೆಗಳನ್ನು ಪ್ರಕಟ ಪಡಿಸಿ ರಾಜ್ಯಾದ್ಯಂತ ಹಂಚಲಾಗುತ್ತಿದೆ. ಮೂರು ಪತ್ರಿಕೆಗಳು: 'ಭ್ರಷ್ಟಾಚಾರ ದರ್ಶನ' [ಅಯ್ಮಿ ಮತ್ತಿ ಏನೋರಮಾ]. 'ಅನೈಕ್ಯತೆಯ ಕಹಳೆ–ತುತ್ತೂರಿ' [ಅನೈಕ್ಯ ಕಹಳಂ] ಮತ್ತು 'ಕರಾಳ ಕೇರಳ' [ಕರಾಳ ಕೇರಳಂ]. ಪ್ರತಿಯೊಂದು ಪತ್ರಿಕೆಯ ಬೆಲೆ 60 ಪೈಸೆ. ಅದರ ಪ್ರಕಟಣೆಯ ದಿನಾಂಕ 23.3.87, ಕೇರಳ ವಿಧಾನ ಸಭಾ ಚುನಾವಣೆಯ ದಿನ. ಈ ಪತ್ರಿಕೆಗಳಲ್ಲಿ ಕೇರಳದ 'ಮಲಯಾಳ ಮನೋರಮಾ' 'ಮಾತೃಭೂಮಿ' ಮತ್ತು ಕೇರಳ 'ಕುಮುದಿ' ಎಂಬ ಮೂರು ಪ್ರಮುಖ ಪತ್ರಿಕೆಗಳಲ್ಲಿ ಕಳೆದ ಐದು ವರ್ಷಗಳಿಂದ ಕರುಣಾಕರನ್ ಸರ್ಕಾರದ ವಿರುದ್ಧ ಪ್ರಕಟವಾದ ವರದಿ, ಲೇಖನ, ವ್ಯಂಗ್ಯ ಚಿತ್ರ, ಸಂಪಾದಕೀಯ, ಇತ್ಯಾದಿ ವಿಷಯಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

'ಭ್ರಷ್ಟಾಚಾರ ದರ್ಶನ'ದಲ್ಲಿ UDF ನ ಮಂತ್ರಿಗಳ ನಾಯಕರ ವಿರುದ್ಧ ಭ್ರಷ್ಟಾಚಾರಗಳ ಆಪಾದನೆಯ ವಿಷಯಗಳಿವೆ. ಅನೈಕ್ಯತೆಯ ಕಹಳೆಯಲ್ಲಿ UDF ಘಟಕಗಳೊಳಗಿನ ಆಂತರಿಕ ಹಾಗೂ ಪರಸ್ಪರಿಕ ಕಲಹಗಳ ಪೂರ್ಣ ಮಾಹಿತಿಗಳಿವೆ, ಈ ಅಂತಃ ಕಲಹಗಳು ಅನೇಕ ಬಾರಿ UDF ಸರ್ಕಾರದ ಭದ್ರತೆಗೇ ಮಾರಕವಾಗಿದ್ದವು. "ಕರಾಳ ಕೇರಳ" ದಲ್ಲಿ ಮಹಿಳೆಯರ ಮಾನಭಂಗ, ಕೊಲೆ, ಪೋಲೀಸರ ಅಮಾನುಷ ಕಾರ್ಯಾಚರಣೆ, ಜೈಲಿನಲ್ಲಿ ಸಾವು ಇತ್ಯಾದಿ ಕರಾಳ ವಿಷಯಗಳಿವೆ.

ಈ ಮೂರು ಅಪೂರ್ವ ಪತ್ರಿಕೆಗಳನ್ನು ಚುನಾವಣಾ ಪ್ರಚಾರ ಕಾಲದಲ್ಲಿ ಸಂಪಾದಿಸಿ ಪ್ರಕಟಪಡಿಸಿದ್ದು ಎಡ ಮತ್ತು ಪ್ರಜಾಪ್ರಭುತ್ವ ರಂಗದ (UDF) ಘಟಕವಾದ ಭಾರತದ ಕಮ್ಯುನಿಸ್ಟ್ ಪಕ್ಷದ (ಸಿ.ಪಿ.ಐ) ಮಾಜಿ ವಿಧಾನ ಸಭೆಯಲ್ಲಿ ಸದಸ್ಯರಾದ ಕಾ. ಕಣಿಯಾಪುರಂ ರಾಮಚಂದ್ರನ್ ಮತ್ತು ಅವರ ಸಹಾಯಕರಾದ ಕಾ. ಅಂಟೋನಿ ಥೋಮಸ್. ○

ಖಾನ್ - ನಯಾರ್ ಸಂದರ್ಶನದಲ್ಲಿ ಹೊರಬಿದ್ದ ಬಾಂಬ್

ಪರಮಾಣು ಬಾಂಬ್ ತಯಾರಿಸಲು ನಮ್ಮವರಿಗೆ ಸಾಧ್ಯವಿಲ್ಲವೆಂದು ನಿಮ್ಮ ಪರಮಾಣು ವಿಜ್ಞಾನಿ ಎಚ್.ಎನ್. ಸೇಥ್ನಾ ಹೇಳಿದ್ದರು. ಈಗ ನೋಡಿ ನಾವು ಈ ಬಾಂಬು ಮಾಡಿದ್ದೇವೆ. ಎಂದು ಈಚೆಗೆ ಜಂಬ ಕೊಚ್ಚಿಕೊಂಡವರು ಬೇರೆ ಯಾರೂ ಅಲ್ಲ ಪಾಕಿಸ್ಥಾನದ ಪರಮಾಣು ಬಾಂಬು ಜನಕನೆಂದು ಹೆಸರಾದ ಅಬ್ದುಲ್ ಖಾದಿರ್ ಖಾನ್.

ಇತ್ತೀಚೆಗೆ ಖಾನ್‌ರವರನ್ನು ಸಂದರ್ಶಿಸಿದ ಭಾರತದ ಪತ್ರಕರ್ತ ಕುಲದೀಪ್ ನಯ್ಯರ್‌ರವರ ಬಳಿ ಮಾತನಾಡುತ್ತಾ ಖಾನ್ ಹಲವು ರಹಸ್ಯಗಳನ್ನು ಬಯಲಿಗಿಟ್ಟರು.

ಪಾಕಿಸ್ಥಾನ ಪರಮಾಣು ಸಾಧನೆಯ ಹಾದಿಯಲ್ಲಿ ಬಹಳ ಕಾಲದಿಂದ ದೃಢ ಹೆಜ್ಜೆ ಹಾಕುತ್ತಿದೆಯೆಂಬುದು ಜಗತ್ತಿಗೇ ಗೊತ್ತುಂಟು. ರಹಸ್ಯ ಪ್ರಣಯದ ಫಲವನ್ನು ಎಷ್ಟು ಕಾಲ ತಾನೇ ಬಚ್ಚಿಡಲು ಸಾಧ್ಯ ? ಅದು ಎಂದಿದ್ದರೂ ಬಹಿರಂಗವಾಗಬೇಕಾದ ರಹಸ್ಯ. ಎಲ್ಲರಿಗೂ ಗೊತ್ತಾಗಬೇಕು. ಆದರೆ ಬಾಯಲ್ಲಿ ಮಾತ್ರ ಹೇಳಬಾರದು ಇದು ಪಾಕಿಸ್ಥಾನದ ನೀತಿ. ಇದಕ್ಕೆ ಅಮೇರಿಕಾ ಕುಮ್ಮಕ್ಕು.

ಆದರೆ ಖಾನ್ ಇದ್ದದ್ದನ್ನು ಇದ್ದಂತೆ ಒದರಿಬಿಟ್ಟರೆಂದು ಅಧ್ಯಕ್ಷ ಯಾಗೆ ಅಸಮಧಾನವಾಯಿತಂತೆ. ಈ ಇಕ್ಕಟ್ಟಿನಿಂದ ನುಣುಚಿಕೊಳ್ಳಲು ಖಾನ್ ಪ್ರಯತ್ನ. ನಾನು ಯಾವುದೋ ಸಂದರ್ಭದಲ್ಲಿ ಏನನ್ನೋ ಹೇಳಿದರೆ ನಯ್ಯರರು ಸಂದರ್ಭ ತಪ್ಪಿಸಿ ಬೇರೆ ಅರ್ಥ ಬರುವಂತೆ ಉದ್ದರಿಸಿದ್ದಾರೆಂದು ಖಾನ ವಿವರಣೆ. ತಾವು ಅವರಿಗೆ ಸಂದರ್ಶನ ನೀಡಲು ಒಪ್ಪಿರಲಿಲ್ಲವೆಂದು ಹೇಳಿಕೆ. ಆಮೇಲೆ ಸಂರ್ಶನಕ್ಕೊಪ್ಪಿಕೊಂಡಿದ್ದೆ ಎಂದು ತಪ್ಪೊಪ್ಪಿಗೆ.

ಈ ಎಲ್ಲ ಒದರಾಟದ ಫಲವೆಂದರೆ ಇವರಿಬ್ಬರ ಸಂದರ್ಶನ ಏರ್ಪಡಿಸಿದ್ದ 'ಮುಸ್ಲಿಂ' ಇಂಗ್ಲಿಷ್ ಪತ್ರಿಕೆಯ ಸಂಪಾದಕ ಮುಷಾಹಿದ್ ಹುಸೇನರ ರಾಜಿನಾಮೆ, ಖಾನ್ ಭದ್ರ.

ಡಾ. ಖಾನ್ ಹೀಗೆ ಮಾಡಿದ್ದು ಇದೇ ಮೊದಲಲ್ಲ. ಮೂರು ವರ್ಷ ಹಿಂದೆಯೂ ಇವರು ಇದೇ ರೀತಿ ಒದರಿದ್ದರು. ಪಾಕಿಸ್ಥಾನ ಪರಮಾಣು ಬಾಂಬ್ ತಯಾರಿಸುವ ಸಾಮರ್ಥ್ಯ ಸಂಪಾದಿಸಿ ಕೊಂಡಿದೆಯೆಂದು ಹೇಳಿದರು. ಇದರಿಂದಾಗಿ ಅಮೇರಿಕಾದಿಂದ ಪಾಕಿಸ್ಥಾನಕ್ಕೆ ನೆರವು ನಿಂತುಹೋದಿತೆಂದು ಜಿಯಾಗೆ ಭಯವಾಗಿತ್ತು. ಖಾನರೂ ಆಗ ರಾಜನಾಮೆಗೆ ಸಿದ್ಧವಾಗಿದ್ದರು. ಆದರೆ ಜಿಯಾ ಬೇಡವೆಂದರಂತೆ.

(ಎಚ್ಚೆಸ್ಕೆ- 'ಸುಧಾ'ಕೃಪೆ)

ಪಾಕಿಸ್ತಾನದಲ್ಲಿನ್ನೊಂದು ಸ್ಥಾವರ ?

ಅಣ್ವಸ್ತ್ರ ತಯಾರಿಸಲು ಬೇಕಾದ ಉತ್ತಮ ಮಟ್ಟದ ಯುರೇನಿಯಂ ಉತ್ಪಾದಿಸಬಲ್ಲ ಎರಡು ಅಣು ಸ್ಥಾವರಗಳು ಪಾಕಿಸ್ಥಾನದಲ್ಲಿವೆ ಎಂದು ಬೆಲ್ಜಿಯಂನ ಹಿರಿಯ ವಿಜ್ಞಾನಿಯೊಬ್ಬರು ಬಹಿರಂಗ ಪಡಿಸಿದ್ದಾರೆ. ಪಾಕಿಸ್ತಾನದ ಅಣುಬಾಂಬಿನ ಸೃಷ್ಟಿಕರ್ತ ಡಾ. ಅಬ್ದುಲ್ ಖಾದಿರ್‌ಖಾನ್ ಪಾಕಿಸ್ಥಾನಕ್ಕೆ ಮರಳುವ ಮುನ್ನ ಈ ವಿಜ್ಞಾನಿಯೊಡನೆ ಕೆಲಸ ಮಾಡಿದರು.

ಪಾಕಿಸ್ಥಾನದ ಖಾಯಂ ಶತ್ರುವಾಗಿರುವ ಭಾರತ ಒಂದು ವೇಳೆ ಅಹುಟಾ ಅಣುಸ್ಥಾವರದ ಮೇಲೆ ಧಾಳಿ ಮಾಡಿದರೆ ಅದು ತನ್ನ ಕೃತ್ಯಕ್ಕೆ ತಕ್ಕ ಫಲ ಅನುಭವಿಸಬೇಕಾದೀತು ಎಂದುಖಾನ್ ಅಬ್ಸರ್ವರ್ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಹೇಳಿದಾಗ ಈ ದ್ವಿತೀಯ ಅಣು ಸ್ಥಾವರದ ಸುಳಿವು ಸಿಕ್ಕಿತು.

ಕಹುಟಾ ಸ್ಥಾವರವನ್ನು ಪ್ರಸ್ತಾಪಿಸಿದ ಡಾ. ಖಾನ್ 'ಹೇಗಿದ್ದರೂ ಈ ಸ್ಥಾವರಕ್ಕೆ ಸರಿಯಾದ ರಕ್ಷಣೆ ನೀಡಲಾಗಿದೆ. ನಾವು ಎಲ್ಲಾ ಮೊಟ್ಟೆಗಳನ್ನೂ ಒಂದೇ ಬುಟ್ಟಿಯಲ್ಲಿ ಇರಿಸಿಲ್ಲ' ಎಂದಿದ್ದರು.

ಕಹುಟಾಪ್ರಯೋಗಾಲಯದ ಉಪಗ್ರಹ ಛಾಯಾಚಿತ್ರಗಳ ಸಹಿತ ಡಾ. ಬಾಬೆರ್ಸ್ ಅವರ ವಿವರವಾದ ಸಂದರ್ಶನವನ್ನು ಅಬ್ಸರ್ವರ್ ಪತ್ರಿಕೆಪ್ರಕಟಿಸಿದೆ.

ಪಾಕ್‌ಗೆ ಮಿಲಿಟರಿ ನೆರವು ಬೇಡ

ಪಾಕಿಸ್ಥಾನ ಅಣ್ವಸ್ತ್ರ ಉತ್ಪಾದನೆ ಕಾರ್ಯಕ್ರಮವನ್ನು ಕೈಬಿಟ್ಟ ಹೊರತು ಯೋಜಿತ 400 ಕೋಟಿ ಡಾಲರ್ ಸಹಾಯ ನೀಡಬಾರದೆಂದು ನ್ಯೂಯಾರ್ಕ್ ಟೈಮ್ಸ್ ಅಮೇರಿಕಕ್ಕೆ ಆಗ್ರಹಪಡಿಸಿದ.

ಪಾಕಿಸ್ಥಾನದ ಒತ್ತಡಕ್ಕೆ ಅಮೇರಿಕ ಮಣಿಯಬಾರದು ಎಂದು ಪತ್ರಿಕೆಸಲಹೆ ಮಾಡಿದೆ.

ತಮ್ಮ ದೇಶ ಅಣ್ವಸ್ತ್ರ ಕಾರ್ಯಕ್ರಮ ಹಮ್ಮಿಕೊಂಡಿಲ್ಲ ಎಂದು ಪಾಕಿಸ್ಥಾನ ಸುಳ್ಳು ಹೇಳುತ್ತ ಬಂದಿದೆ. ಅದೇ ರೀತಿ ಅಮೇರಿಕವೂ ಕಟ್ಟುಕಥೆ ಹೇಳುತ್ತಲೇ ಇದೆ ಎಂದು ತನ್ನ ಸಂಪಾದಕೀಯದಲ್ಲಿ ಅದು ಹೇಳಿದೆ.

'ಈಗ ಪಾಕಿಸ್ಥಾನ ಅಣ್ವಸ್ತ್ರ ಉತ್ಪಾದಿಸುವ ಹೊಸ್ತಿಲಲ್ಲಿ ಇದೆ ಎಂದು ಗೂಢಚರ್ಯೆ ವರದಿ ತಿಳಿಸಿವೆ. ರೇಗನ್ ಆಡಳಿತ ಇನ್ನು ಯಾವ ಕಾರಣವೂ ನೀಡುವಂತಿಲ್ಲ' ಎಂದು ತಿಳಿಸಿದೆಯಲ್ಲದೆ ತಕ್ಷಣವೇ ರೇಗನ್ ಸರ್ಕಾರ ಪಾಕಿಸ್ತಾನಕ್ಕೆ ಮಿಲಿಟರಿ ನೆರವು ನೀಡುವುದನ್ನು ನಿಲ್ಲಿಸಿ ಅಫ್ಘನ್ ವಿವಾದಕ್ಕೆ ಸಂಬಂಧ ಪಟ್ಟಂತೆ ಸೋವಿಯತ್ ಒಕ್ಕೂಟದ ಜೊತೆ ಒಪ್ಪಂದ ಮಾಡಿಕೊಳ್ಳಬೇಕೆಂದು ಪತ್ರಿಕೆ ಸಲಹೆ ಮಾಡಿದೆ. ●

ದ. ಆಫ್ರಿಕಾದಲ್ಲಿ ತುರ್ತುಪರಿಸ್ಥಿತಿ

ದ. ಆಫ್ರಿಕಾದಲ್ಲಿ ಹೇರಲಾಗಿರುವ ತುರ್ತು ಪರಿಸ್ಥಿತಿ ಪ್ರತೀ ದಿನದ ರಕ್ತಪಾತಕ್ಕೆ ಮತ್ತು ಅಶಾಂತಿಗೆ ಕಾರಣವಾಗಿದೆಯೆಂದು ಸಂಯುಕ್ತ ರಾಷ್ಟ್ರಗಳ ಮಾನವ ಹಕ್ಕುಗಳ ಸಮಿತಿ ಹೇಳಿಕೆಯನ್ನು ಹೊರಡಿಸಿದೆ.

'ತನ್ನ ಅಧಿಕಾರದ ದುರುಪಯೋಗ' ಎಂದು ಈ ಕ್ರಮವನ್ನು ಖಂಡಿಸಿರುವ ಸಮಿತಿ ಪೋಲೀಸ್ ಮತ್ತು ಮಿಲಿಟರಿ ಅಧಿಕಾರಿಗಳಿಗೆ ನೀಡಿರುವ ಸ್ವೇಚ್ಛೆಯಿಂದಾಗಿ ನೇಣು, ಕೊಲೆ, ಸೆರೆವಾಸ, ಸಜೀವ ದಹನಗಳಿಗೆ ಎಡೆಮಾಡಿದೆ ಎಂದು ಹೇಳುತ್ತಾ ಇದುವರೆಗೂ ನಡೆದಿರುವ 155 ಘಟನೆಗಳಲ್ಲಿ ಕನಿಷ್ಠ 600 ಜನರು ಮರಣಹೊಂದಿದ್ದು ಸೆರೆಮನೆಯಲ್ಲಿ ಬಂಧಿತರಾಗಿರುವ, ಸಜೀವ ಶಿಕ್ಷೆಗೆ ಗುರಿಯಾಗಿರುವವರಲ್ಲಿ 256 ಮಂದಿ ಮಕ್ಕಳೇ ಇದ್ದಾರೆಂಬುದನ್ನು ಸಾದರಪಡಿಸಿದೆ.

ಅಂತರಾಷ್ಟ್ರೀಯ

ನೀರಿಲ್ಲದ ನೈಲ್

ಈಜಿಪ್ತಿನ ಜೀವಸೆಲೆಯಾದ ನೈಲ್ ಬತ್ತಿ ಹೋಗಿದೆ. ಇತ್ತೀಚಿನ ನೂರು ವರ್ಷಗಳಲ್ಲಿ ಕಂಡು ಕೇಳರಿಯದ ಜಲಕ್ಷಾಮದಿಂದಾಗಿ ಈಜಿಪ್ತ್ ನಿಟ್ಟುಸಿರುಡುತ್ತಿದೆ.

ಹಿಂದೊಮ್ಮೆ ಮಹಾಪೂರವನ್ನುಕ್ಕಿಸುತ್ತಿದ್ದ ನೈಲ್ ಸತತವಾಗಿ ಬತ್ತಿ ಹೋಗಿ ಏಳನೆಯ ಭೀಕರ ವರ್ಷಕ್ಕೆ ಕಾಲಿಡುತ್ತಿದೆ. 1981 ರಿಂದಲೂ ಬತ್ತಿ ಹೋಗಿರುವ ಸೆಲೆ ಈ ವರ್ಷವೂ ಮುಂದುವರಿಯುವ ಸೂಚನೆಯಿರುವುದು ಅಲ್ಲಿ ಜನರಲ್ಲಿ ಭಯ ಹುಟ್ಟು ಹಾಕಿದೆ.

ಭೀಕರ ಬರಗಾಲವನ್ನು ಉಂಡ ಇಥಿಯೋಪಿಯಾಗೂ ಈ ನೈಲ್ ನದಿಯ ಬಹಳಷ್ಟು ಭಾಗ ಉಪಯೋಗವಾಗುತ್ತಿದ್ದುದು ಈ ಕ್ಷಾಮದಿಂದ ಇಥಿಯೋಪಿಯಾ ಸಹಾ ತಲ್ಲಣಿಸುತ್ತಿದೆ. ಕಳೆದ ವರ್ಷ ಇಥಿಯೋಪಿಯಾದಲ್ಲಿ ಮಳೆಯಾಗಿದ್ದರೂ ಈ ನೈಲ್ ನದಿಯ ಭಾಗದ ಮೇಲೆ ಮಳೆಯಾಗದೆ ಹೋದದ್ದರಿಂದ ನೈಲ್ ಮತ್ತೆ ತುಂಬಿ ಹರಿಯುವ ಆಸೆಯನ್ನು ಜನ ಕಳೆದುಕೊಂಡಿದ್ದಾರೆ. ●

ನಿರಾಶ್ರಿತರ ಮನವಿ

'ನಮಗೆ ಮನುಷ್ಯರ ಮಾಂಸವನ್ನು ತಿನ್ನಲು ಅವಕಾಶ ನೀಡಿ ಎಂದು ಬೈರೂತ್‌ನಲ್ಲಿರುವ ಪ್ಯಾಲಸ್ತೀನ್ ನಿರಾಶ್ರಿತರು ತಮ್ಮ ಮುಸ್ಲಿಂ ನಾಯಕರಿಗೆ ಮನವಿ ಮಾಡಿದ್ದಾರೆ.

ನಮಗೆ ತಿನ್ನಲು ಏನನ್ನಾದರೂ ಕೊಡಿ, ಇಲ್ಲವೆ ಬದುಕು ಸಾಗಿಸುವುದಕ್ಕಾಗಿ ಮನುಷ್ಯರ ಮಾಂಸವನ್ನು ತಿನ್ನಲಾದರೂ ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿರುವುದನ್ನು ಪ್ಯಾಲಸ್ತೀನ್ ವಿಮೋಚನಾ ರಂಗದ ಪ್ರಮುಖರು ಇಂದು ಬಹಿರಂಗಪಡಿಸಿದರು.

ಇನ್ನು ಬದುಕಿ ಉಳಿಯಲು ಅಶಕ್ತರಾಗಿರುವವರ ಮಾಂಸ ಭಕ್ಷಿಸಲು ನಮಗೆ ಅವಕಾಶ ಮಾಡಿಕೊಡಿ ಎಂದು ಪ್ಯಾಲಸ್ತೀನ್ ಮಹಿಳಾ ಗುಂಪೊಂದು ವಿಶೇಷವಾಗಿ ಮನವಿ ಮಾಡಿತ್ತು.

ಪ್ರಪಂಚದಾದ್ಯಂತ ರಾಜಕೀಯ ವಲಯದಲ್ಲಿ ತಮ್ಮ ಹಸಿವು ಹಾಹಾಕಾರದತ್ತ ಗಮನ ಸೆಳೆಯಲು ಈ ಮಾಂಸ ಭಕ್ಷಣೆ ಮನವಿಯನ್ನು ಏರ್ಪಡಿಸಲಾತ್ತು ○

ಶಸ್ತ್ರ ವಿದಾಯಕ್ಕೆ ಚೀನಾ ಸಿದ್ಧ

ಅಣ್ವಸ್ತ್ರಗಳಿಗೆ ಹಾಗೂ ಶಸ್ತ್ರಗಳಿಗೆ ವಿದಾಯ ಹೇಳಲು ಚೀನಾ ಸಿದ್ಧವಾಗಿದೆ. ಸೋವಿಯತ್ ರಾಷ್ಟ್ರ ಮತ್ತು ಅಮೇರಿಕಾ ಯುರೊಪಿನಿಂದ ಶಸ್ತ್ರಗಳನ್ನು ಇಲ್ಲವಾಗಿಸಲು ಪ್ರಯತ್ನಿಸಿದಲ್ಲಿ ರಾಷ್ಟ್ರ ಅಣ್ವಸ್ತ್ರ ನಿಷೇಧದ ಅಂತರಾಷ್ಟ್ರೀಯ ಮಾತು ಕಥೆಯ ಜೊತೆ ಕೈಗೂಡಿಸಲು ಒಪ್ಪುತ್ತದೆ ಎಂದು ಚೀನಾ ವಿದೇಶಾಂಗ ಸಚಿವ ವುಕ್ವೆಕ್ವಿಯಾನ್ ಹೇಳಿದ್ದಾರೆ. ○

ಯುದ್ಧ ಭೀಕರತೆ ಸಾರುವ ಚಿತ್ರ

'ಬಾಂಬ್ ಬಿತ್ತು. ಎಲ್ಲೆಡೆಯೂ ಮೌನ ಸೀಳುವ ಕೂಗು ಸಹಾಯ, ಸಹಾಯ. ಹೊರಗಡೆಯಿಂದ ಬರುವ ಆಸರೆಗಾಗಿ ನಿರೀಕ್ಷೆ. ಬದುಕಿಸುವವರು ಬರುತ್ತಾರೋ ಇಲ್ಲವೋ ? ಸುಟ್ಟ ಭೂಮಿ, ಬಾಯ್ಬಿಟ್ಟ ಬದುಕು. ತಲೆನೋವು, ಡಯಾರಿಯಾ, ಹಲ್ಲುಗಳಿಂದ ರಕ್ತ ಸೋರಿಕೆ, ಕೊನೆಗೆ ನಮಗೆ ಉಳಿದದ್ದು ಉರಿ, ನೋವು ಮಾತ್ರ. ಸಾವು ಹತ್ತಿರ ಹತ್ತಿರ ಬರುತ್ತಿದ್ದಂತೆ ನನಗೆ ಹತ್ತಿರವಾದದು ಟೆನ್ನಿಸನ್‌ನ ಯುದ್ಧ ವಿರೋಧಿ ಕವನ ಮಾತ್ರ. ಅದನ್ನೇ ಹಾಡುತ್ತಾ ಕಣ್ಮುಚ್ಚಿದೆ'.

ಇದೇ ಯುದ್ಧ ಭೀಕರತೆಯನ್ನು ಬಣ್ಣಿಸಿ ಎದೆ ಝಲ್ಲೆನ್ನುವಂತೆ ಮಾಡುವ ಚಿತ್ರ ಬ್ರಿಟನ್ನಿನಲ್ಲಿ ಭಾರೀ ಸುದ್ದಿ ಮಾಡಿದೆ. 'ನನ್ನ ತಂದೆತಾಯಿ ಭೀಕರ್ ಬಾಂಬ್ ದಾಳಿಗೆ ತುತ್ತಾಗಿ ಮಡಿದ ದಾರುಣ ನೆನಪು ನನ್ನನ್ನು ಈ ಚಿತ್ರ ತಯಾರಿಸುವಂತೆ ಮಾಡಿತು' ಎನ್ನುವ ತರುಣ ನಿರ್ದೇಶಕನ ಈ 'ವೆನ್ ದಿ ವಿಂಡ್ ಬ್ಲೋ' ಸಾಕಷ್ಟು ಗದ್ದಲಕ್ಕೀಡಾಗಿದೆ. ಹಿರೋಷಿಮಾ ನಾಗಸಾಕಿಯಲ್ಲಿ ಬಂಧುಗಳನ್ನು ಕಳೆದುಕೊಂಡ ಕ್ಯಾನೆರಾಮನ್ ಹೀಗೆ ಬಾಂಬ್ ದಾಳಿಯ ಅನುಭವವಿರುವ ಈ ತಂಡ ಈ ಚಿತ್ರ ಹೆಚ್ಚು ಜನಮನಕ್ಕೆ ನಾಟುವಂತೆ ಮಾಡಿದ್ದಾರೆ.

ಈ ಚಿತ್ರಕಥೆ ಹೊಂದಿರುವ ಪುಸ್ತಕದ ಮಾರಾಟವೂ ಭರ್ಜರಿಯಾಗಿದ್ದು ಈಗಾಗಲೇ ಇವರ 40 ಸಾವಿರ ಪ್ರತಿಗಳು ಮಾರಾಟವಾಗಿವೆ. ●

ಆಂಧ್ರಪ್ರದೇಶ ಮಂಡಲ್ ಪಂಚಾಯತ್ ಹಾಗೂ ನಗರಸಭಾ ಚುನಾವಣೆಳು

ಮಾರ್ಚ್ 11 ಹಾಗೂ 14 ರಂದು ಆಂಧ್ರಪ್ರದೇಶದ 3ಕೋಟಿ ಗ್ರಾಮೀಣ ಮತದಾರರಲ್ಲಿ 65-70 ಶೇಕಡಾದಷ್ಟು ಭಾಗವಹಿಸಿದ್ದ ಮತದಾನದಲ್ಲಿ ಸರ್ವಾಧಿಕಾರೀ ಶಕ್ತಿಗಳು ಮತ್ತೊಮ್ಮೆ ಸೋತಿವೆ. 22ಜಿಲ್ಲಾ ಪರಿಷತ್‌ಗಳು ಹಾಗೂ1053 ಮಂಡಲಗಳಿಗೆ ಈಚುನಾವಣೆಗಳು ನಡೆದವು.

ಮತದಾನದ ಫಲಿತಾಂಶಗಳು ಹೀಗಿದೆ

	ಸ್ಪರ್ಧಿಸಿದ ಸ್ಥಾನಗಳು	ಗೆದ್ದ ಸ್ಥಾನಗಳು
ತೆಲುಗು ದೇಶಂ	986	632
ಸಿ. ಪಿ. ಐ. [ಎಂ]	68	42
ಕಾಂಗ್ರೆಸ್ [ಐ]	1048	388
ಸಿ. ಪಿ. ಐ.	296	14
ಜನತಾ	67	2
ಬಿ. ಜೆ. ಪಿ.	300	ಒಂದೂ ಇಲ್ಲ.

ಇದಲ್ಲದೆ ಕಾಂಗ್ರೆಸ್ [ಎಸ್] 1, 30 ಪಕ್ಷೇತರ ಅಭ್ಯರ್ಥಿಗಳು ಗೆದಿದ್ದಾರೆ

21 ಜಿಲ್ಲಾ ಪರಿಷತ್‌ಗಳಲ್ಲಿ ಕಾಂಗ್ರೆಸ್ [ಐ] ಕೇವಲ ಮೂರನ್ನಷ್ಟೇ ಪಡೆಯುವುದು ಸಾಧ್ಯವಾಗಿದೆ. 18ನ್ನು ತೆಲುಗುದೇಶಂ ಗೆದ್ದುಕೊಂಡಿದೆ. ಚುನಾವಣೆಗಳನ್ನು ಎನ್. ಟಿ. ಆರ್. ಸರ್ಕಾರ ಉರುಳಿಸುವ ಮೊದಲಹಕ್ಷ ಎಂದು ಪರಿಗಣಿಸಿತ್ತು ಎಂಬುದು ಗಮನಾರ್ಹ. ಈ ದೃಷ್ಟಿಯಿಂದ ಅದು ತನ್ನೆಲ್ಲಾ ಶಕ್ತಿ-ಸಂಪನ್ಮೂಲಗಳನ್ನು ಇದರಲ್ಲಿ ತೊಡಗಿಸಿ, ತೆಲುಗುದೇಶಂ ಪಕ್ಷ ಇದರಲ್ಲಿ ಸೋತರೆ ವಿಧಾನಸಭೆಯನ್ನು ವಿಸರ್ಜಿಸಲು ಒತ್ತಾಯಿಸುವುದಾಗಿ ಹೇಳಿಕೊಂಡಿತು. ಈ ಚುನಾವಣೆಗಳಲ್ಲಿ ಬಿ.ಜೆ.ಪಿ. ಯಂತೂ ನಿರ್ನಾಮವಾದಂತಾಗಿದೆ. ಸಿ.ಪಿ.ಐ. [ಎಂ]ನ ಸಲಹೆಯಂತೆ ಸಿ ಪಿ.ಐ. ಅವಕಾಶವಾದಿಯಾಗದೆ ಸರ್ವಾಧಿಕಾರೀ-ವಿರೋಧಿ ಚುನಾವಣಾ ಮೈತ್ರಿಯಲ್ಲಿ ಸೇರಿಕೊಂಡಿದ್ದರೆ ಕಾಂಗ್ರೆಸ್ [ಐ] ಇನ್ನೂ ಹೆಚ್ಚಿನ ಮಟ್ಟದಲ್ಲಿ ಮಣ್ಣು ಮುಕ್ಕುತ್ತಿತ್ತೆಂಬುದರಲ್ಲಿ ಸಂಶಯವಿಲ್ಲ.

ನಗರ ಸಭೆಗಳಿಗೆ ಹಾಗೂ ವಿಜಯವಾಡಾ ಕಾರ್ಪೊರೇಶನ್‌ಗೆ ನಡೆದ ಚುನಾವಣೆಗಳ ಫಲಿತಾಂಶದಿಂದ ಇದು ಸ್ಪಷ್ಟವಾಗಿದೆ. ಕಾಂಗ್ರೆಸ್ [ಐ] ಗೆ ಇವುಗಳಲ್ಲಿ ತೆಲುಗು ದೇಶಂ ಪಕ್ಷ 40 ಮುನಿಸಿಪಾಲಿಟಿಗಳಿಗಿಂತ 9 ಹೆಚ್ಚು ಸಿಗುವುದು ಸಾಧ್ಯವಾಯಿತು. ಸಿ.ಪಿ.ಐ. (ಎಂ) ಗೆ ಎರಡು ಪುರಸಭೆಗಳು ದೊರೆತರೆ, ಸಿ.ಪಿ.ಐ. ಗೆ ಒಂದೂ ದೊರೆತಿಲ್ಲ. ಸಿ. ಪಿ. ಐ. ತನ್ನ ಪ್ರಮಾದಕ್ಕೆ ತಕ್ಕ ಬೆಲೆ ತೆತ್ತಿದೆ. ಮಾತ್ರವಲ್ಲ ಆಂಧ್ರದಲ್ಲಿ ಕಾಂಗ್ರೆಸ್ (ಐ)ನ ಸಂಪೂರ್ಣ ಪರಾಭವವನ್ನು ತಡೆಯಲು ಪರೋಕ್ಷವಾಗಿ ನೆರವಾಗುವ ಅಕ್ಷಮ್ಯ ಅಪರಾಧ ಮಾಡಿತು ಎಂದು ಇತಿಹಾಸದಲ್ಲಿ ದಾಖಲಾಗುವಂತಾಗಿದೆ.

ಹತಾಶ ಪ್ರಧಾನಿ

(1ನೇ ಪುಟದಿಂದ)

ಬೂರ್ಜ್ವಾ ಪತ್ರಿಕೆಗಳು ರಾಜೀವರ ಬುರುಡೆಗಳಿಗೆಹೆಚ್ಚಿನ ಪುಕ್ಕಟೆ ಪ್ರಚಾರ ಒದಗಿಸಿ ಎಡರಂಗದ ವಿರುದ್ಧ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಉತ್ತರವಾಗಿ ಬಂಗಾಳಿಯ ಪ್ರಗತಿಪರ ಜಾತ್ರಾ ತಂಡಗಳು ಎಡರಂಗದ ಪರ ಪ್ರಚಾರ ನಡೆಸುತ್ತಿವೆ. ಪ. ಬಂಗಾಳಕ್ಕೆ ಕೇಂದ್ರದ 'ನೆರವ'ನ್ನು ತೋರಿಸಿ ಮಾಯ ಮಾಡುವ ಕಾಂಗ್ರೆಸ್ 'ಮ್ಯಾಜಿಕ್'ನ್ನು ಕೆಲವು ತಂಡಗಳು ಜನರಿಗೆ ತೋರಿಸುತ್ತಿವೆ. ಅಧಿಕೃತ ಪ್ರಚಾರ ಮಾಧ್ಯಮಗಳ ಅಪಪ್ರಚಾರಕ್ಕೆ ಉತ್ತರವಾಗಿ ಪ್ರಗತಿ ಚಲಚಿತ್ರ ಕೇಂದ್ರ' ಎಂಬ ಪ್ರಗತಿಪರ ತಂಡ 30 ನಿಮಿಷಗಳ ಫಿಲಂ ಒಂದನ್ನು ತಯಾರಿಸಿದೆ. ಎಡರಂಗದ ಪ್ರಚಾರ ಸಭೆಗಳಲ್ಲಿ ಇದನ್ನು ವ್ಯಾಪಕವಾಗಿ ತೋರಿಸಲಾಗುತ್ತಿದೆ. 'ಮಾನುಷೆರ್ ಅಧಿಕಾರ' (ಮನುಷ್ಯನ ಅಧಿಕಾರ) ಎಂಬ ಹೆಸರಿನ ಈ ಫಿಲಂ ಕಳೆದ 20 ವರ್ಷಗಳಲ್ಲಿ ಪ. ಬಂಗಾಳದ ಜನತೆಯ ಅನುಭವಗಳನ್ನೂ ಈಗಿನ ಕನಸು, ಬಯಕೆಗಳನ್ನು ಮೂಡಿಸುವ ಉತ್ತಮ ಪ್ರಯತ್ನ ಮಾಡಿದೆ. 1972-77ರ ಕಾಂಗ್ರೆಸ್ 'ಗೂಂಡಾಗಿರಿಯ ವರ್ಷಗಳು' ಮತ್ತು ಅನಂತರದ ಪ್ರಜಾಸತ್ತಾತ್ಮಕ ಪ್ರಗತಿಯನ್ನು ಮನದಟ್ಟಾಗುವಂತೆ ನಿರೂಪಿಸಿದೆ.

ಈಗಾಗಲೇ ಎಲ್ಲರಿಗೂ ಗೊತ್ತಿರುವಂತೆ ಕಾಂಗ್ರೆಸ್ (ಐ) ಮುಂಬಯಿಯ ಜನಮರುಳು ಮಾಡಬಲ್ಲ ಹಿಂದಿ ನಾಯಕರ ಮೊರೆ ಹೊಕ್ಕಿದೆ. ಈ ಮೂಲಕ ತನ್ನ 'ಸಂಸ್ಕೃತಿ' ಹಿಂದೀ ಫಿಲಂ ಸಂಸ್ಕೃತಿಗಿಂತ ಮೇಲ್ಮಟ್ಟದಲ್ಲಿಲ್ಲ ಎಂದು ಪ್ರದರ್ಶಿಸಿದೆ. ರಾಜೇಶ್ ಖನ್ನ ಮತ್ತು ಅಮಿತಾಬ್ ಬಚ್ಚನ್ ಕಾಂಗ್ರೆಸ್ (ಐ) ಪರ ಪ್ರಚಾರ ಮಾಡುತ್ತಿದ್ದಾರೆ. ಹಿಂದೀ ನಾಯಕರ ಈ ಪ್ರಚಾರ ಉತ್ತಮ ಸಾಂಸ್ಕೃತಿಕ ಮಟ್ಟ ಹೊಂದಿರುವ ಈ ರಾಜ್ಯದಲ್ಲಿ ಕಾಂಗ್ರೆಸ್ (ಐ)ಗೆ ತಿರುಗುಬಾಣವಾಗಬಹುದು ಎಂದು ಕೆಲವು ಬೂರ್ಜ್ವಾ ಪತ್ರಿಕೆಗಳೇ ಅಭಿಪ್ರಾಯಪಟ್ಟಿವೆ. ಇವರ ಸಭೆಗಳಿಗೆ ಮತದಾರರಲ್ಲದ ಹದಿಹರೆಯದ ಹುಡುಗ-ಹುಡುಗಿಯರಷ್ಟೇ ಬರುತ್ತಿದ್ದಾರೆ ಎಂದೂ ವರದಿಯಾಗಿದೆ.

ಅಧ್ಯಯನ ಶಿಭಿರ

10.3.1987 ರಂದು ಸವದತ್ತಿ ಅಧ್ಯಯನ ಶಿಬಿರ ನಡೆಯಿತು. ಶಿಬಿರಕ್ಕೆ ಸುಮಾರು 30 ಜನ ಯುವಕರು ಹಾಜರಿದ್ದರು. ಡಿ. ವೈ. ಎಫ್. ಐ. ರಾಜ್ಯ ಕಾರ್ಯದರ್ಶಿ ಕಾ. ಎಸ್. ಶಿವರಾಂರವರು ಶಿಬಿರದಲ್ಲಿ ಹಾಜರಿದ್ದ ರಾಜ್ಯ ಸಮಿತಿಯ ಸದಸ್ಯ ಮತ್ತು ಬೆಳಗಾಂ ಜಿಲ್ಲಾ ಸಂಚಾಲಕರಾದ ಕಾ. ಎಲ್. ಎಸ್. ನಾಯಕ್ ರವರು ಮತ್ತು ಚಿದಾನಂದ ತೆಗ್ಗಿಹಳ್ಳಿ, ಕೃಷ್ಣ ಕಟ್ಟಿ ಇವರುಗಳೂ ಮಾತನಾಡಿದರು.

ಒಂದು ವಿಶೇಷ ಪ್ರಕಟಣೆ

ಒಂದು ಬಹು-ಅಮೂಲ್ಯ ಕೀಲಿ ಗೊಂಚಲು ಕಳೆದು ಹೋಗಿದೆ. ಇದು ಎಷ್ಟು ಮುಖ್ಯವಾಗಿದ್ದೆಂದರೆ ಇದಿಲ್ಲದೆ ಯಾವುದೇ ಕಾರ್ಖಾನೆಗಳ ಗೇಟು ತೆರೆಯಲು ಸಾಧ್ಯವಿಲ್ಲ. ಈ ಕೀಲಿ ಗೊಂಚಲು ಕಂಡವರು ತತ್‌ಕ್ಷಣ ಕೆಳಕಂಡ ವಿಳಾಸಕ್ಕೆ ತಲುಪಿಸಬೇಕಾಗಿ ವಿನಂತಿ.

ಶ್ರೀ ಪ್ರಿಯರಂಜನ ದಾಸ ಮುನ್ಷಿ
ಪ್ರದೇಶ ಕಾಂಗ್ರೆಸ್ (ಐ) ಸಮಿತಿ, ಕಲ್ಕತ್ತಾ

-ಇದು ಹೌರಾ ಕ್ಷೇತ್ರದಲ್ಲಿ (ಮುನ್ಷಿಯವರ ಕ್ಷೇತ್ರ) ಎಡರಂಗದ ಪೋಸ್ಟರ್. 1984ರ ಲೋಕಸಭಾ ಚುನಾವಣೆಯಲ್ಲಿ ಕೀಲಿಗೊಂಚಲು ತೋರಿಸಿ ಮುನ್ಷಿ ಹೇಳುತ್ತಿದ್ದರಂತೆ ಪ. ಬಂಗಾಳದ ಎಲ್ಲಾ ಕಾರ್ಖಾನೆಗಳನ್ನು ತೆರೆಯುವ ಕೀಲಿ ಗೊಂಚಲು ಇಲ್ಲಿದೆ ಕಾಂಗ್ರೆಸ್‌ಗೆ ಮತನೀಡಿದ ಮರುದಿನವೇ ಮುಚ್ಚಿದ ಎಲ್ಲಾ ಕಾರ್ಖಾನೆಗಳನ್ನೂ ತೆರೆಯುತ್ತೇವೆ ಎಂದು. ಚುನಾವಣೆಯೂ ಆಯಿತು ಕಾಂಗ್ರೆಸ್ ವಿಜಯೋತ್ಸವವೂ ಆಯಿತು. ಆದರೆ ? ಈ ಪೋಸ್ಟರ್ ಅವರ ಬೊಗಳೆಗೆ ಎಡರಂಗದ ಉತ್ತರ.

ಈ ವಾರ....

ಶ್ರೀಯಾನ್ ಜೆ. ಆರ್. ಡಿ. ಟಾಟಾ ನೇತೃತ್ವದ ಪರಿಣತ ಯೋಜನಾ ತಂಡ ಏರ್ ಇಂಡಿಯಾ ಹಾಗೂ ಇಂಡಿಯನ್ ಏರ್‌ಲೈನ್ಸ್‌ಗಳ ಖಾಸಗೀಕರಣದ ಸಲಹೆ ನೀಡಿವೆ. ಈ ಸಲಹೆಯನ್ನು ಯೋಜನಾ ಆಯೋಗದ ನಿರ್ವಾಹಕ ಸಮಿತಿ ಪರಿಶೀಲಿಸುತ್ತಿದೆ.

-ಸಂಸತ್ತಿನಲ್ಲಿ ಸಾಗಾಣಿಕೆ ರಾಜ್ಯ ಮಂತ್ರಿ
ಟೈಟ್ಲರ್. ಮಾ, 13

ಹಲವಾರು ರಾಜ್ಯಗಳಲ್ಲಿ ಆಡಳಿತ ನಡೆಸುವ ಮಂದಿಯೇ ಸೂಳೆಗಾರಿಕೆಯತ್ತ ಮಹಿಳೆಯರನ್ನು ತಳ್ಳುವ ಮಾರಾಟದ ಕೆಲಸದಲ್ಲಿ ತೊಡಗಿದ್ದಾರೆಂಬ ಆಪಾದನೆಗಳಿರುವಾಗ ಮಹಿಳೆಯರಿಗೆ ಸ್ವಾಭಾವಿಕ ನ್ಯಾಯದ ಪರಿಕಲ್ಪನೆ ಸಾಕಾರವಾಗುವುದರ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಇ. ಎಸ್. ವೆಂಕಟರಾಮಯ್ಯ ಸಂಶಯ ವ್ಯಕ್ತಪಡಿಸಿದ್ದಾರೆ.

-ಡೆಕ್ಕನ್ ಹೆರಾಲ್ಡ್ ಸುದ್ದಿ, ಮಾ. 15

ದ್ವಿತೀಯ ಮಹಾಯುದ್ಧ ಮುಗಿದ ಕೂಡಲೇ ಅಮೆರಿಕಾ ಸೋವಿಯತ್ ಒಕ್ಕೂಟದ ಮೇಲೆ ಪರಮಾಣು ದಾಳಿ ನಡೆಸಿ ಸೋವಿಯತ್ ಪ್ರದೇಶ ಆಕ್ರಮಿಸಿಕೊಳ್ಳುವ ಮತ್ತು ಅದನ್ನು 'ಸ್ವತಂತ್ರ ಅಮೆರಿಕಾ-ಪರ ಸರಕಾರಗಳು' ನಡೆಸುವ ಹಲವಾರು ದೇಶಗಳಾಗಿ ಒಡೆಯುವ ಗುಪ್ತ ಯೋಜನೆ ತಯಾರಿಸಿತ್ತು ಎಂದು ಇತ್ತೀಚೆಗೆ ಪ್ರಕಟವಾದ ಇಬ್ಬರು ಅಮೇರಿಕನ್ ಪ್ರೊಫೆಸರುಗಳ ಪುಸ್ತಕದಿಂದ ಬಹಿರಂಗವಾಗಿದೆ.

-ಯು. ಎನ್. ಐ. ಸುದ್ದಿ, ಮಾ. 15

ನ್ಯೂ ಟೈಮ್ ಮ್ಯಾಗಜಿನ್‌ನ ಅಭಿಪ್ರಾಯ ಸಂಗ್ರಹದ ಪ್ರಕಾರ ಶೇಕಡ 52 ಅಮೆರಿಕನ್ನರು ನಿಕಾರಾಗುವಾದ ಕಾಂಟ್ರಾಗಳಿಗೆ ಅಮೆರಿಕನ್ ಸರ್ಕಾರದ ನೆರವನ್ನು ವಿರೋಧಿಸುತ್ತಾರೆ. ಶೇಕಡ 62 ಮಂದಿ ಅಮೆರಿಕನ್ ಸೇನೆಗಳು ನಿಕಾರಾಗುವಾ ಪ್ರವೇಶಿಸಬಹುದೆಂಬ ನಿರಾಶಾಭಾವನೆ ಹೊಂದಿದ್ದಾರೆ.

ಎ.ಎಫ್.ಐ. ಸುದ್ದಿ, ಮಾ. 16

ಸಿಂಧನೂರಿನ ಮಹಿಳೆಯರಿಂದ ವಿಶ್ವಶಾಂತಿ ಬಗ್ಗೆ ಚಿಂತನೆ

ರಾಯಚೂರಿನಲ್ಲ ಸಿಂಧನೂರು ಎಂಬುದೊಂದು ತಾಲ್ಲೂಕು ಕೇಂದ್ರ. ದಿನಾಂಕ 14-3-87ರಂದು 300 ಜನ ಮಹಿಳೆಯರು ಸಾಲು ಹಿಡಿದು ಮೆರವಣಿಗೆಯಲ್ಲಿ ಹೊರಟಿದ್ದಾರೆ. ಮಧ್ಯಮ ವರ್ಗದ ನೌಕರರು, ಗೃಹಿಣಿಯರು ಕೃಷಿಕಾರ್ಮಿಕ ಮಹಿಳೆಯರು ಇದ್ದ ಈ ಮೆರವಣಿಗೆಯನು ,ಇದೇನಿದು? ಎಂದು ಜನ ಮೂಗಿನ ಮೇಲೆ ಬೆರಳಿಟ್ಟು ನೋಡುತ್ತಿದ್ದಾರೆ. ಸಿಂಧನೂರಿನಲ್ಲಿ ಇದೇ ಮೊದಲ ಮೆರವಣಿಗೆಯೇನಲ್ಲ ಕೃಷಿಕಾರ್ಮಿಕ-ಗಂಡಸರು ಹಾಗೂ ಹೆಂಗಸರು, ರೈತರು ಭೂಮಿಗಾಗಿ ಕೂಲಿಗಾಗಿ ಫಸಲಿಗೆ ಹೆಚ್ಚಿನ ಬೆಲೆಗಾಗಿ ಮೆರವಣಿಗೆ ಹೋಗಿರುವುದನ್ನು ಅನೇಕರು ನೋಡಿದ್ದಾರೆ. ಆದರೆ ಈ ಮೆರವಣಿಗೆ ಬಾಂಬು ಬೇಡ,ರೊಟ್ಟಿ ಬೇಕು, ಯುದ್ಧ ಬೇಡ ಶಾಂತಿ ಬೇಕು, ವಿಶ್ವಶಾಂತಿ ಚಿರಾಯುವಾಗಲಿ ಎಂಬ ಘೋಷಣೆ ಹೊರಡುತ್ತಿವೆ. ಈ ಮೆರವಣಿಗೆ ಊರಿನ ಮುಖ್ಯ ಬೀದಿಗಳಲ್ಲಿ ಸಂಚರಿಸಿ ಜ್ಯೋತಿ ಮಹಿಳಾ ಸಮಾಜದ ಮೈದಾನವನ್ನು ತಲಪುತ್ತದೆ.

ಈ ಮಹಿಳೆಯರೆಲ್ಲ ಸೇರಿರುವುದು ಅಂತರಾಷ್ಟ್ರೀಯ ದುಡಿಯುವ ಮಹಿಳೆಯರ ದಿನಾಚರಣೆಯನ್ನು ಆಚರಿಸುವ ಸಲುವಾಗಿ.ಸಿಂಧನೂರಿನಲ್ಲಿರುವ 5-6 ಮಹಿಳಾ ಸಮಾಜ ವನಿತಾ ಸಮಾಜಗಳು ಹಾಗೂ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಸ್ಥಳೀಯ ಘಟಕವೂ ಸೇರಿ ರಚಿಸಿಕೊಂಡ ಮಹಿಳಾ ದಿನಾಚರಣಾ ಸಮಿತಿಯಡಿಯಲ್ಲಿ ಒಂದುವಾರಕಾಲ ಹಮ್ಮಿಕೆವಾಗಿ ಕಾರ್ಯಕ್ರಮಗಳುಜರುಗಿವೆ. ಈ ಪುಟ್ಟ ಪಟ್ಟಣ ಬೇರೆ ಬೇರೆ ಭಾಗಗಳಲ್ಲಿ ಸಣ್ಣ ಸಭೆಗಳು ಜರುಗಿ ವಿಶ್ವಶಾಂತಿಯ ಬಗ್ಗೆ ಚಿಂತನೆ ನಡೆಸಿದ್ದಾರೆ. ಸಾರ್ವಜನಿಕ ಜೀವನದಲ್ಲಿ ಮಹಿಳೆಯರ ಪಾಲು ಎಂಬ ಬಗ್ಗೆ ಚರ್ಚಾಸ್ಪರ್ಧೆ ಕೂಡಾ ನಡೆದು ದಿನಾಂಕ ಹದಿನಾಲ್ಕರಂದು ಬಹುಮಾನ ವಿತರಣೆ ಕೂಡ ಹಮ್ಮಿಕೊಂಡಿದ್ದಾರೆ. ಇಂತಹ ಒಂದು ಊರಿನಲ್ಲಿ ಸಾಮಾನ್ಯವಾಗಿ ಹೊಲಿಗೆ, ಕಸೂತಿ, ಶಿಶುವಿಹಾರ ಇಂತಹವುಗಳಲ್ಲಿಯೇ ಯಾವಾಗಲೂ ಮಗ್ನವಾಗಿರುವ ಮಹಿಳಾ ಸಮಾಜಗಳೂ ಇಂತಹ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದು ವಿಶ್ವಶಾಂತಿಯ ಬಗ್ಗೆ ಸಾಮ್ರಾಜ್ಯಶಾಹಿಯ ಬಗ್ಗೆ ಪಾಕಿಸ್ತಾನದ ಬಾಂಬ್ ಬಗ್ಗೆ ಚಿಂತಿಸುವ ಪ್ರಯಣ ಯೋಚನೆ ಮಾಡಿದ್ದು ಸರಿಸಮಾನರಾಗಿ ಮಹಿಳೆಯರ ಎಚ್ಚತ್ತ ಪ್ರಜ್ಞೆಯ ಸೂಚನೆಯಾಗಿದೆ.

○

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,
Sultanpet B-53 Phone : 75331 Editor P. Ramachandra Rao Managing Editor : N.K. Upadhyaya